# ಮೈಸೂರು ವಿಶ್ವವಿದ್ಯಾನಿಲಯ

ಮೈಸೂರು ವಿಶ್ವವಿದ್ಯಾನಿಲಯದ ಕ್ರಾಫರ್ಡ್ ಭವನದ ಶೈಕ್ಷಣಿಕ ಸಭಾಂಗಣದಲ್ಲಿ ದಿನಾಂಕ 01-10-2020ರಂದು ಪೂರ್ವಾಹ್ನ 11-30 ಗಂಟೆಗೆ ನಡೆದ ಸಿಂಡಿಕೇಟಿನ ಆರನೇ ಸಾಮಾನ್ಯ ಸಭೆಯ ನಡಾವಳಿ.

**ಹಾಜರಿದ್ದ ಸದಸ್ಯರು:**

| | | |
|---|---|---|
| 1 | ಪ್ರೊ. ಜಿ.ಹೇಮಂತಕುಮಾರ್ | ಕುಲಪತಿಗಳು ಹಾಗೂ ಅಧ್ಯಕ್ಷರು |
| 2 | ಆಯುಕ್ತರು, ಕಾಲೇಜು ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ ಇವರ ಪರವಾಗಿ ಜಂಟಿ ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆ, ಪ್ರಾದೇಶಿಕ ಕಛೇರಿ, ಮೈಸೂರು. | ಸದಸ್ಯರು |
| 3 | ಪ್ರೊ. ಡಿ.ಆನಂದ್ | ಸದಸ್ಯರು |
| 4 | ಶ್ರೀಮತಿ ಸಹನಾ ಶಿವಪ್ಪ | ಸದಸ್ಯರು |
| 5 | ಡಾ. ಚೈತ್ರ ನಾರಾಯಣ | ಸದಸ್ಯರು |
| 6 | ಶ್ರೀ ಕುಮಾರ | ಸದಸ್ಯರು |
| 7 | ಶ್ರೀಮತಿ ಕೆ.ನಾಗರತ್ನಮ್ಮ | ಸದಸ್ಯರು |
| 8 | ಶ್ರೀ ದಿನೇಶ್.ಎಂ.ಗಾವಂಕರ್ | ಸದಸ್ಯರು |
| 9 | ಶ್ರೀ ಆರ್.ಪ್ರದೀಪ್‌ಕುಮಾರ್ ದೀಕ್ಷಿತ್ | ಸದಸ್ಯರು |
| 10 | ಶ್ರೀ ಎಸ್.ಡಿ.ದೊಡ್ಡಚಾರಿ | ಸದಸ್ಯರು |
| 11 | ಶ್ರೀಮತಿ. ಪವಿತ್ರ.ವೈ.ಕೆ | ಸದಸ್ಯರು |
| 12 | ಡಾ. ಈ.ಸಿ.ನಿಂಗರಾಜ್‌ಗೌಡ | ಸದಸ್ಯರು |
| 13 | ಡಾ. ಎಂ.ಎಸ್.ದಾಮೋದರ | ಸದಸ್ಯರು |
| 14 | ಪ್ರೊ. ಕೆ.ಎಂ.ಮಹದೇವನ್, ಕುಲಸಚಿವರು (ಪರೀಕ್ಷಾಂಗ) | ಸದಸ್ಯರು |
| 14 | ಪ್ರೊ. ಟಿ.ಎಸ್.ದೇವರಾಜ, ಹಣಕಾಸು ಅಧಿಕಾರಿಗಳು | ಸದಸ್ಯರು |
| 16 | ಪ್ರೊ. ಆರ್.ಶಿವಪ್ಪ | ಕುಲಸಚಿವರು ಹಾಗೂ ಸದಸ್ಯ ಕಾರ್ಯದರ್ಶಿಗಳು |

**ಹಾಜರಾಗದ ಸದಸ್ಯರು:**

1. ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ.
2. ನಿರ್ದೇಶಕರು, ವೈದ್ಯಕೀಯ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ.

3. ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ.
4. ನಿರ್ದೇಶಕರು, ಪದವಿಪೂರ್ವ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ.
5. ಶ್ರೀ ಟಿ.ರಾಮಕೃಷ್ಣ, ಸಿಂಡಿಕೇಟ್ ಸದಸ್ಯರು.
6. ಡಾ.ಸೈಯದ್ ಕಾರ್ಝು ಮೊಹಿದ್ದೀನ್, ಸಿಂಡಿಕೇಟ್ ಸದಸ್ಯರು.

ಮೊದಲಿಗೆ ಇತ್ತೀಚೆಗೆ ನಿಧನರಾದ ರೈಲ್ವೆ ಖಾತೆ ರಾಜ್ಯ ಸಚಿವ ಶ್ರೀ ಸುರೇಶ್ ಅಂಗಡಿ, ಖ್ಯಾತ ಹಿನ್ನೆಲೆ ಗಾಯಕರಾದ ಡಾ. ಎಸ್.ಪಿ.ಬಾಲಸುಬ್ರಮಣಿಯಂ ಮತ್ತು ಶ್ರೀ ಬಿ.ನಾರಾಯಣ ರಾವ್, ಶಾಸಕರು ಇವರುಗಳು ನಿಧನರಾದ ಹಿನ್ನೆಲೆಯಲ್ಲಿ ಮೃತರ ಗೌರವಾರ್ಥ ಎರಡು ನಿಮಿಷಗಳ ಕಾಲ ಸಭೆಯಲ್ಲಿ ಮೌನವನ್ನಾಚರಿಸಲಾಯಿತು.

ತದನಂತರ, ಮಾನ್ಯ ಕುಲಪತಿಗಳು ಸಭೆಗೆ ಆಗಮಿಸಿದ್ದ ಎಲ್ಲಾ ಸದಸ್ಯರುಗಳನ್ನು ಸ್ವಾಗತಿಸಿದರು ಹಾಗೂ ಹೊಸದಾಗಿ ಸಿಂಡಿಕೇಟಿಗೆ ಗೌರವಾನ್ವಿತ ಕರ್ನಾಟಕ ರಾಜ್ಯ ರಾಜ್ಯಪಾಲರು ಮತ್ತು ವಿಶ್ವವಿದ್ಯಾನಿಲಯಗಳ ಕುಲಾಧಿಪತಿಗಳಿಂದ ನಾಮನಿರ್ದೇಶನಗೊಂಡಿರುವ ಡಾ. ಚೈತ್ರಾ ನಾರಾಯಣ ಇವರನ್ನು ಸ್ವಾಗತಿಸಿ ಪರಿಚಯಿಸಿದರು.

ನಂತರ ಕಾರ್ಯಸೂಚಿಯಲ್ಲಿನ ವಿಷಯಗಳನ್ನು ಸಭೆಯಲ್ಲಿ ಮಂಡಿಸಿದರು.

| | |
|---|---|
| ವಿಷಯ ಸಂಖ್ಯೆ – I | ದಿನಾಂಕ 04-09-2020ರಂದು ಸಿಂಡಿಕೇಟಿನ ಐದನೇ ಸಾಮಾನ್ಯ ಸಭೆಯ ನಡವಳಿಗಳನ್ನು ದೃಢೀಕರಿಸುವ ಬಗ್ಗೆ. |
| **ತೀರ್ಮಾನ :** | ದೃಢೀಕರಿಸಲಾಯಿತು. |
| ವಿಷಯ ಸಂಖ್ಯೆ – II | ದಿನಾಂಕ 04-09-2020ರಂದು ಸಿಂಡಿಕೇಟಿನ ಐದನೇ ಸಾಮಾನ್ಯ ಸಭೆಯಲ್ಲಿ ತೆಗೆದುಕೊಂಡ ತೀರ್ಮಾನಗಳ ಬಗ್ಗೆ **ಕ್ರಮ ಕೈಗೊಂಡ ವರದಿ.** |
| **ತೀರ್ಮಾನ :** | ಕ್ರಮಕೈಗೊಂಡ ವರದಿಯನ್ನು ಗಮನಿಸಲಾಯಿತು. |
| 2020/10.1 | ಡಾ. ಬಿ.ಆರ್.ಅಂಬೇಡ್ಕರ್ ಸ್ನಾತಕೋತ್ತರ ಕೇಂದ್ರಕ್ಕೆ ಸಂಬಂಧಿಸಿದ ಕರಡು ಪರಿನಿಯಮಾವಳಿಯನ್ನು ಮಾರ್ಪಡಿಸಿ ಸರ್ಕಾರಕ್ಕೆ ಸಲ್ಲಿಸುವ ಬಗ್ಗೆ. |
| **ತೀರ್ಮಾನ :** | ಡಾ. ಬಿ.ಆರ್.ಅಂಬೇಡ್ಕರ್ ಸ್ನಾತಕೋತ್ತರ ಕೇಂದ್ರಕ್ಕೆ ಅಗತ್ಯವಾಗಿ ಬೇಕಾಗಿರುವ ಈ ಕೆಳಕಂಡ* ಹುದ್ದೆಗಳನ್ನು ಪರಿನಿಯಮಾವಳಿಯಲ್ಲಿ ಪರಿಷ್ಕರಿಸಿ/ ಸೇರ್ಪಡೆಗೊಳಿಸಿ, ಕರಡು ಪರಿನಿಯಮಾವಳಿಯನ್ನು ಸನ್ಮಾನ್ಯ ಕುಲಾಧಿಪತಿಗಳ ಅಂಕಿತಕ್ಕಾಗಿ ದಿನಾಂಕ 03-09-2020ರಂದು ಸರ್ಕಾರಕ್ಕೆ ಪತ್ರ ಬರೆದಿರುವ ವಿಶ್ವವಿದ್ಯಾನಿಲಯದ ಕ್ರಮವನ್ನು ಸಿಂಡಿಕೇಟ್ ಅನುಸಮರ್ಥಿಸಿತು. |

| ಕ್ರ.ಸಂ. | ಕೋರ್ಸ್‌ಗಳ ವಿವರ | ಹುದ್ದೆಗಳ ವಿವರ | | |
|---|---|---|---|---|
| 01 | ಎಂ.ಎಸ್.ಡಬ್ಲ್ಯು | 1 | 1 | 2 |
| 02 | ಎಂ.ಕಾಂ | 1 | 1 | 2 |
| 03 | ಅರ್ಥಶಾಸ್ತ್ರ | 1 | 1 | 2 |
| 04 | ಗಣಿತಶಾಸ್ತ್ರ | 1 | 1 | 2 |

| | | | | | |
|---|---|---|---|---|---|
| | 05 | ಕನ್ನಡ | 1 | 1 | 2 |
| | 06 | ರಾಜ್ಯಶಾಸ್ತ್ರ | 1 | 1 | 2 |
| | 07 | ಗಣಕ ವಿಜ್ಞಾನ | 1 | 1 | 2 |
| | 08 | ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ | 1 | 1 | 2 |
| | 09 | ರಸಾಯನಶಾಸ್ತ್ರ | 1 | 1 | 2 |
| | 10 | ಭೌತಶಾಸ್ತ್ರ | 1 | 1 | 2 |

| | |
|---|---|
| **2020/10.2** | ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಶ್ರೀ ಬಸವೇಶ್ವರ ಸಾಮಾಜಿಕ ಪರಿಷ್ಕರಣ, ಸಂಶೋಧನಾ ಮತ್ತು ವಿಸ್ತರಣಾ ಕೇಂದ್ರ ಸ್ಥಾಪಿಸುವ ಬಗ್ಗೆ ಸಿದ್ಧಪಡಿಸಿರುವ ಪರಿಷ್ಕೃತ ಪರಿನಿಯಮಾವಳಿಯ ಅನುಮೋದನೆಗಾಗಿ. |
| ತೀರ್ಮಾನ | ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಶ್ರೀ ಬಸವೇಶ್ವರ ಸಾಮಾಜಿಕ ಪರಿಷ್ಕರಣ ಸಂಶೋಧನಾ ಮತ್ತು ವಿಸ್ತರಣಾ ಕೇಂದ್ರ ಸ್ಥಾಪಿಸುವ ಬಗ್ಗೆ ಸರ್ಕಾರದ ಅಧೀನ ಕಾರ್ಯದರ್ಶಿ, ಉನ್ನತ ಶಿಕ್ಷಣ ಇಲಾಖೆ (ವಿಶ್ವವಿದ್ಯಾಲಯಗಳು-1), ಕರ್ನಾಟಕ ಸರ್ಕಾರದ ಪತ್ರ ಸಂಖ್ಯೆ ಇಡಿ106.ಯುಎಂವಿ 2019, ದಿನಾಂಕ 01-06-2020 ರಲ್ಲಿ ಪ್ರಸ್ತುತ ಇರುವ ಪ್ರಾಧ್ಯಾಪಕರು ಹಾಗೂ ಸಿಬ್ಬಂದಿಗಳನ್ನು ಬಳಸಿಕೊಂಡು ಕೇಂದ್ರವನ್ನು ಸ್ಥಾಪಿಸಿ ನಿರ್ವಹಿಸುವುದಾದಲ್ಲಿ ಹಾಗೂ ಅದರಂತೆ ಪರಿನಿಯಮಾವಳಿಯಲ್ಲಿ ಅಗತ್ಯ ಬದಲಾವಣೆಗಳನ್ನು ತಿದ್ದುಪಡಿ ಮಾಡಿ ಕಳುಹಿಸಿಕೊಡುವಂತೆ ನಿರ್ದೇಶಿಸಿರುವ ಹಿನ್ನೆಲೆಯಲ್ಲಿ ಪರಿನಿಯಮಾವಳಿಯಲ್ಲಿನ ಕಂಡಿಕೆ-9ರಲ್ಲಿ ಹಣಕಾಸಿನ ನಿರ್ವಹಣೆಗೆ ಸಂಬಂಧಿಸಿದಂತೆ ಕೆಲವೊಂದು ಮಾರ್ಪಾಡುಗಳನ್ನು ಅಧಿನಿಯಮದಲ್ಲಿ ಪರಿಷ್ಕರಿಸಿ ಸಿದ್ಧಪಡಿಸಿರುವ ಕರಡು ಪರಿನಿಯಮಾವಳಿಯನ್ನು ಸಿಂಡಿಕೇಟ್ ಸಭೆಯು ಪರಿಶೀಲಿಸಿ ಅನುಮೋದಿಸಿತು. |
| **2020/10.3** | ಐ.ಓ.ಇ, ಯೋಜನೆಯಡಿಯಲ್ಲಿ ಖರೀದಿಸಿರುವ ವೈಜ್ಞಾನಿಕ ಉಪಕರಣಗಳನ್ನು ಬಳಸಿಕೊಳ್ಳಲು ಬಳಕೆದಾರರಿಗೆ ಪರಿಷ್ಕೃತ ಶುಲ್ಕವನ್ನು ನಿಗಧಿಪಡಿಸುವ ಬಗ್ಗೆ. |
| ತೀರ್ಮಾನ : | ಸಂಯೋಜಕರು (ಪ್ರಭಾರ), ಐ.ಓ.ಇ, ಯೋಜನೆ, ಮಾನಸಗಂಗೋತ್ರಿ, ಮೈಸೂರು, ಇವರಿಗೆ ಐ.ಓ.ಇ, ಯೋಜನೆಯಡಿಯಲ್ಲಿ ಖರೀದಿಸಿರುವ ವೈಜ್ಞಾನಿಕ ಉಪಕರಣಗಳನ್ನು ಬಳಸಿಕೊಳ್ಳಲು ಬಳಕೆದಾರರಿಗೆ ಪರಿಷ್ಕೃತ ಶುಲ್ಕವನ್ನು ನಿಯಮಾನುಸಾರ ನಿಗಧಿಪಡಿಸಿ ಸಂಗ್ರಹಿಸಲು ಈಗಾಗಲೇ ವಿ.ವಿ.ಆದೇಶ ಸಂಖ್ಯೆ ಡಿವಿ2/299/10/2010-11 (Vol-IV) ದಿನಾಂಕ 7-9-2020ರಲ್ಲಿ ಆಡಳಿತಾತ್ಮಕ ಮಂಜೂರಾತಿ ನೀಡಿರುವುದನ್ನು ಗಮನಿಸಿದ ಸಿಂಡಿಕೇಟ್ ಸಭೆಯು ಅನುಸಮರ್ಥಿಸಿತು. |
| **2020/10.4** | ಮೈಸೂರು ವಿಶ್ವವಿದ್ಯಾನಿಲಯದ ವಿವಿಧ ವಿಭಾಗಗಳಿಗೆ ಹಾಗೂ ಸ್ನಾತಕೋತ್ತರ ಕೇಂದ್ರಗಳಿಗೆ ಶೈಕ್ಷಣಿಕ ಹಿತದೃಷ್ಠಿಯಿಂದ Purchase of 600 MBPS Internet Band with ಸೌಲಭ್ಯವನ್ನು ಒದಗಿಸುವ ಬಗ್ಗೆ. |
| ತೀರ್ಮಾನ | ಮೈಸೂರು ವಿಶ್ವವಿದ್ಯಾನಿಲಯದ ವಿವಿಧ ವಿಭಾಗಗಳಿಗೆ ಹಾಗೂ ಸ್ನಾತಕೋತ್ತರ ಕೇಂದ್ರಗಳಿಗೆ ಶೈಕ್ಷಣಿಕ ಹಿತದೃಷ್ಠಿಯಿಂದ Purchase of 600 MBPS |

| | |
|---|---|
| | Internet Band with ಸೌಲಭ್ಯವನ್ನು ಒದಗಿಸಲು ವಿಶ್ವವಿದ್ಯಾನಿಲಯದ ನಿಯಮಾನುಸಾರ ಇ-ಪೋರ್ಟಲ್ ಮುಖೇನ ಕ್ರಮಕೈಗೊಳ್ಳಲು ಹಾಗೂ ಸದರಿ ವೆಚ್ಚವನ್ನು "Information and Infrastructure Development Fund (I.I.D.F) " ಶೀರ್ಷಿಕೆಯ ಅನುದಾನದಿಂದ ಭರಿಸುವ ಸಂಬಂಧ ವಿ.ವಿ.ಆದೇಶ ಸಂಖ್ಯೆ ಡಿವಿ2/ I.I.D.F/373/ಇತರೆ/ 2016-17 (Vol.III) ದಿನಾಂಕ 11-02-2020ರಂದು ಹೊರಡಿಸಲಾಗಿರುವ ವಿಶ್ವವಿದ್ಯಾನಿಲಯದ ಕ್ರಮವನ್ನು ಸಿಂಡಿಕೇಟ್ ಸಭೆಯು ಅನುಸಮರ್ಥಿಸಿತು. |
| **2020/10.5** | ಡಾ. ಬಸವರಾಜ ಹಟ್ಟಿ, ಸಹಾಯಕ ಪ್ರಾಧ್ಯಾಪಕರು, ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾನಿಲಯ ಇವರು ಮೈಸೂರು ವಿಶ್ವವಿದ್ಯಾನಿಲಯಕ್ಕೆ ಅಂತರ ವಿಶ್ವವಿದ್ಯಾನಿಲಯ ವರ್ಗಾವಣೆಯನ್ನು ಕೋರಿರುವ ಬಗ್ಗೆ. |
| ತೀರ್ಮಾನ | ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಶಿಕ್ಷಣ ಇಲಾಖೆ (ಉನ್ನತ ಶಿಕ್ಷಣ), ಬೆಂಗಳೂರು ಇವರು ಡಾ. ಬಸವರಾಜ ಹಟ್ಟಿ, ಸಹಾಯಕ ಪ್ರಾಧ್ಯಾಪಕರು, ವಿಜಯನಗರ ಶ್ರೀ ಕೃಷ್ಣದೇವರಾಯ ವಿಶ್ವವಿದ್ಯಾನಿಲಯದಿಂದ ಇವರು ಮೈಸೂರು ವಿಶ್ವವಿದ್ಯಾನಿಲಯ ಭೂವಿಜ್ಞಾನ ಅಧ್ಯಯನ ವಿಭಾಗದಲ್ಲಿ ಖಾಲಿ ಇರುವ ಸಹಾಯಕ ಪ್ರಾಧ್ಯಾಪಕರ ಹುದ್ದೆಗೆ ವರ್ಗಾಯಿಸಿಕೊಳ್ಳುವ ಪ್ರಸ್ತಾವನೆಯನ್ನು ವಿಶ್ವವಿದ್ಯಾನಿಲಯದ ವಿವಿಧ ಪ್ರಾಧಿಕಾರಗಳ ಅನುಮೋದನೆಯೊಂದಿಗೆ ಸ್ಪಷ್ಟ ಅಭಿಪ್ರಾಯವನ್ನು ನೀಡುವಂತೆ ಕೋರಿರುವ ವಿಷಯವನ್ನು ಸಿಂಡಿಕೇಟ್ ಸಭೆಯು ಪರಿಶೀಲಿಸಿ ಸದರಿಯವರು ಹುದ್ದೆಯ ಸಮೇತ (along with post) ವರ್ಗಾವಣೆಯಾಗಿ ವಿಶ್ವವಿದ್ಯಾನಿಲಯಕ್ಕೆ ಬರುವುದಾದಲ್ಲಿ ಅವಕಾಶ ನೀಡಲು ನಿರ್ಣಯಿಸಿತು. |
| **2020/10.6** | ಪ್ರೊ. ಶಿವಬಸವಯ್ಯ, ನಿರ್ದೇಶಕರು, ಡಾ. ಬಿ.ಆರ್.ಅಂಬೇಡ್ಕರ್ ಸ್ನಾತಕೋತ್ತರ ಕೇಂದ್ರ, ಚಾಮರಾಜನಗರ ಇವರಿಗೆ ತಡೆಹಿಡಿದಿರುವ ವಾರ್ಷಿಕ ವೇತನ ಬಡ್ತಿಗಳನ್ನು ಬಿಡುಗಡೆಗೊಳಿಸುವಂತೆ ಕೋರಿರುವ ಬಗ್ಗೆ. |
| | 1. ಮಾನ್ಯ ಸದಸ್ಯರಾದ ಪ್ರೊ. ಎಸ್.ಡಿ.ದೊಡ್ಡಚಾರಿಯವರು ಹಾಗೂ ಡಾ. ಎಂ.ಎಸ್.ದಾಮೋದರವರು ಮಾತನಾಡಿ ಪ್ರೊ. ಶಿವಬಸವಯ್ಯ, ಇವರು ನ್ಯಾಯಾಲಯದಲ್ಲಿ ಹೂಡಿರುವ ದಾವೆಯನ್ನು ಹಿಂಪಡೆಯುವಂತೆ ಸೂಚಿಸಬೇಕೆಂದು ತಿಳಿಸಿದರು.<br>2. ಮಾನ್ಯ ಸದಸ್ಯರಾದ ಡಾ.ಈ.ಸಿ.ನಿಂಗರಾಜ್‌ಗೌಡರವರು ಮಾತನಾಡಿ ಸದರಿಯವರು ತಮ್ಮ ಮನವಿ ಪತ್ರದಲ್ಲಿ ವಾರ್ಷಿಕ ವೇತನ ಬಡ್ತಿಗಳನ್ನು ನೀಡಿದರೆ ಮಾತ್ರ ನಾನು ಹೂಡಿರುವ ಮೊಕದ್ದಮೆಯನ್ನು ಹಿಂಪಡೆಯುತ್ತೇನೆಂದು ವಿಶ್ವವಿದ್ಯಾನಿಲಯಕ್ಕೆ ಅಗ್ರಹಿಸಿರುವ ಕ್ರಮವನ್ನು ಖಂಡಿಸಿ, ಮೈಸೂರು ವಿಶ್ವವಿದ್ಯಾನಿಲಯ ಹಾಗೂ ಸಿಂಡಿಕೇಟ್ ಸಭೆಯ ಮೇಲೆ ಗೌರವ ಹಾಗೂ ವಿಶ್ವಾಸವಿಟ್ಟು ಸದರಿಯವರು ಮೊದಲು ನ್ಯಾಯಾಲಯದಲ್ಲಿ ಹೂಡಿರುವ ದಾವೆಯನ್ನು ಹಿಂಪಡೆಯಬೇಕೆಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದರು. |

| | |
|---|---|
| | 3. ಮಾನ್ಯ ಸದಸ್ಯರಾದ ಡಾ. ಆನಂದ್ ರವರು ಮಾತನಾಡಿ ಪ್ರೊ. ಶಿವಬಸವಯ್ಯ ರವರ ಅಮಾನತ್ತಿನ ಅವಧಿಯನ್ನು ರಜೆಯೆಂದು ಪರಿಗಣಿಸಬೇಕೆಂದು ಸಭೆಗೆ ತಿಳಿಸಿದರು.<br>4. ಪ್ರೊ. ಕೆ.ಎಂ.ಮಹದೇವನ್, ಕುಲಸಚಿವರು (ಪರೀಕ್ಷಾಂಗ)ರವರು ಮಾತನಾಡಿ ಸದರಿಯವರು 14 ತಿಂಗಳಿನಲ್ಲಿ ನಿವೃತ್ತಿ ಹೊಂದುತ್ತಿರುವುದರಿಂದ ಅವರಿಗೆ ನೀಡಬೇಕಾಗಿರುವ ಸವಲತ್ತುಗಳನ್ನು ನೀಡಲು ಶೀಘ್ರವಾಗಿ ಈ ಸಭೆಯಲ್ಲಿ ತೀರ್ಮಾನ ಕೈಗೊಳ್ಳಬೇಕೆಂದು ತಿಳಿಸಿದರು. |
| ತೀರ್ಮಾನ | ಪ್ರೊ. ಶಿವಬಸವಯ್ಯ, ನಿರ್ದೇಶಕರು, ಡಾ. ಬಿ.ಆರ್.ಅಂಬೇಡ್ಕರ್ ಸ್ನಾತಕೋತ್ತರ ಕೇಂದ್ರ, ಚಾಮರಾಜನಗರ ಇವರಿಗೆ ತಡೆಹಿಡಿದಿರುವ ವಾರ್ಷಿಕ ವೇತನ ಬಡ್ತಿಗಳನ್ನು ಬಿಡುಗಡೆಗೊಳಿಸುವ ಮತ್ತು ಇನ್ನಿತರ ಸೇವಾ ವಿಷಯಗಳಿಗೆ ಸಂಬಂಧಿಸಿದಂತೆ ನಿಯಮಾಗಳನುಸಾರ ಸೂಕ್ತ ಕ್ರಮವನ್ನು ತೆಗೆದುಕೊಳ್ಳುವ ಅಧಿಕಾರವನ್ನು ಮಾನ್ಯ ಕುಲಪತಿಯವರಿಗೆ ವಹಿಸಲು ಸಿಂಡಿಕೇಟ್ ತೀರ್ಮಾನಿಸಿತು. |
| **2020/10.7** | ಮೈಸೂರು ವಿಶ್ವವಿದ್ಯಾನಿಲಯದ "The University of Mysore-Recognition of Foreign University/ Institutions- Statutes-2008" ಅಧಿನಿಯಮದನುಸಾರ Specialized Programme ಅಡಿಯಲ್ಲಿ ಮಾನ್ಯತೆ ನೀಡಲಾಗುವ ಸಂಸ್ಥೆಗಳಲ್ಲಿನ ವಿದ್ಯಾರ್ಥಿಗಳ ಪ್ರವೇಶಾತಿ ಶುಲ್ಕವನ್ನು ನಿಗದಿಪಡಿಸಿರುವ ಬಗ್ಗೆ. |
| ತೀರ್ಮಾನ | ಮೈಸೂರು ವಿಶ್ವವಿದ್ಯಾನಿಲಯದ "The University of Mysore-Recognition of Foreign University/ Institutions - Statutes-2008" ಅಧಿನಿಯಮದನುಸಾರ Specialized Programme ಅಡಿಯಲ್ಲಿ ಮಾನ್ಯತೆ ನೀಡಲಾಗುವ ಸಂಸ್ಥೆಗಳಲ್ಲಿನ ವಿದ್ಯಾರ್ಥಿಗಳ ಪ್ರವೇಶಾತಿ ಶುಲ್ಕವನ್ನು ನಿಗದಿಪಡಿಸಿ ಮಂಡಿಸಿರುವ ಪ್ರಸ್ತಾವನೆಯನ್ನು ಸಿಂಡಿಕೇಟ್ ಅನುಮೋದಿಸಿತು. |
| **2020/10.8** | ದೂರ ಶಿಕ್ಷಣ ಕಾರ್ಯಕ್ರಮದಡಿಯಲ್ಲಿ ಜರುಗುವ ಕೋರ್ಸುಗಳಿಗೆ 2018-19ನೇ ಸಾಲಿನಲ್ಲಿ ಹಾಗೂ 2019-20ನೇ ಸಾಲಿನಲ್ಲಿ ಪ್ರವೇಶಾತಿ ಪಡೆದಿರುವ ವಿದ್ಯಾರ್ಥಿಗಳು ಹೆಚ್ಚುವರಿಯಾಗಿ ಪಾವತಿಸಿರುವ ಶುಲ್ಕವನ್ನು 2020-21ನೇ ಸಾಲಿನ ಎರಡನೇ ವರ್ಷದ ಮೂರನೇ ಸೆಮಿಸ್ಟರ್ ಶೈಕ್ಷಣಿಕ ಸಾಲಿನ ಪ್ರವೇಶಾತಿಯಲ್ಲಿ ಶುಲ್ಕ ವಿನಾಯಿತಿ ನೀಡುವ ಬಗ್ಗೆ. |
| ತೀರ್ಮಾನ | ದೂರ ಶಿಕ್ಷಣ ಕಾರ್ಯಕ್ರಮದಡಿಯಲ್ಲಿ ಜರುಗುವ ಕೋರ್ಸುಗಳಿಗೆ 2018-19ನೇ ಸಾಲಿನಲ್ಲಿ ಹಾಗೂ 2019-20ನೇ ಸಾಲಿನಲ್ಲಿ ಪ್ರವೇಶಾತಿ ಪಡೆದಿರುವ ವಿದ್ಯಾರ್ಥಿಗಳು ಹೆಚ್ಚುವರಿಯಾಗಿ ಪಾವತಿಸಿರುವ ವ್ಯತ್ಯಾಸದ ಶುಲ್ಕವನ್ನು ಎರಡನೇ ವರ್ಷದ ಪ್ರವೇಶಾತಿ ಶುಲ್ಕದಲ್ಲಿ ಕಡಿತಗೊಳಿಸಿ ವಿದ್ಯಾರ್ಥಿಗಳಿಂದ ಪಾವತಿಸಿಕೊಳ್ಳಬೇಕಾದ ಶುಲ್ಕಗಳ ಪ್ರಸ್ತಾವನೆಯನ್ನು ಪರಿಶೀಲಿಸಿದ ಸಿಂಡಿಕೇಟ್ ವಿಶ್ವವಿದ್ಯಾನಿಲಯದ ಕ್ರಮವನ್ನು ಸಿಂಡಿಕೇಟ್ ಅನುಸಮರ್ಥಿಸಿತು. ಹಾಗೂ |

| | |
|---|---|
| | ಮಾನ್ಯ ಕುಲಪತಿಯವರು ಮಾತನಾಡಿ ಮುಂದಿನ ಮೂರು ವರ್ಷಗಳವರೆಗೆ ದೂರ ಶಿಕ್ಷಣ ಕಾರ್ಯಕ್ರಮವನ್ನು ಯುಜಿಸಿ ನಿಯಮಾನುಸಾರ ಮುಂದುವರೆಸುತ್ತಿರುವ ಬಗ್ಗೆ ಸರ್ಕಾರಕ್ಕೆ ಪತ್ರ ಬರೆಯಲು ಸಭೆಯಲ್ಲಿ ತೀರ್ಮಾನಿಸಲಾಯಿತು. |
| **2020/10.9** | ದೂರ ಶಿಕ್ಷಣ ಕಾರ್ಯಕ್ರಮದ ಸ್ನಾತಕ/ಸ್ನಾತಕೋತ್ತರ ಕೋರ್ಸುಗಳ 1 ರಿಂದ 6 ಸೆಮಿಸ್ಟರ್‌ಗಳ ಸ್ವಯಂ ಕಲಿಕಾ ಸಾಮಾಗ್ರಿಗಳನ್ನು ರಚಿಸಿರುವ ಅಧ್ಯಾಪಕರುಗಳಿಗೆ ಗೌರವಧನ ನೀಡುವ ಸಂಬಂಧ ಸಿದ್ಧಪಡಿಸಲಾದ ಅಂದಾಜು ವೆಚ್ಚ ಪಟ್ಟಿಯನ್ನು ಸಿಂಡಿಕೇಟ್ ಸಭೆಯಲ್ಲಿ ಅನುಮೋದನೆ ಪಡೆಯುವ ಬಗ್ಗೆ. |
| | ಮಾನ್ಯ ಸದಸ್ಯರಾದ ಡಾ. ಎಂ.ಎಸ್.ದಾಮೋದರ ರವರು ಮಾತನಾಡಿ ಸ್ನಾತಕ/ಸ್ನಾತಕೋತ್ತರ ಕೋರ್ಸುಗಳ 1 ರಿಂದ 6 ಸೆಮಿಸ್ಟರ್‌ಗಳ ಸ್ವಯಂ ಕಲಿಕಾ ಸಾಮಾಗ್ರಿಗಳನ್ನು ರಚಿಸಲು BOS ಅಧ್ಯಕ್ಷರುಗಳನ್ನು ನೇಮಕ ಮಾಡದೇ ಹೊರಗಿನವರನ್ನು ಆಹ್ವಾನಿಸಿರುವುದಕ್ಕೆ ಆಕ್ಷೇಪವನ್ನು ವ್ಯಕ್ತಪಡಿಸಿದರು.<br><br>ಮಾನ್ಯ ಕುಲಪತಿಯವರು ಮಾತನಾಡಿ ವಿಶ್ವವಿದ್ಯಾನಿಲಯದ ಅಧ್ಯಾಪಕರುಗಳು ಸ್ನಾತಕ/ಸ್ನಾತಕೋತ್ತರ ಕೋರ್ಸುಗಳ 1 ರಿಂದ 6 ಸೆಮಿಸ್ಟರ್‌ಗಳ ಸ್ವಯಂ ಕಲಿಕಾ ಸಾಮಾಗ್ರಿಗಳನ್ನು ರಚಿಸಲು ನಿರಾಸಕ್ತಿ ತೋರಿದ್ದರಿಂದ ನುರಿತ ಹೊರಗಿನ ಅಧ್ಯಾಪಕ/ತಜ್ಞ ವೃಂದದವರಿಂದ ರಚಿಸಿರುವುದಾಗಿ ತಿಳಿಸಿದರು.<br><br>ಪ್ರೊ. ಎಸ್.ಡಿ.ದೊಡ್ಡಚಾರಿಯವರು ಮಾತನಾಡಿ ವಿದ್ಯಾರ್ಥಿಗಳಿಂದ ಬಂದಿರುವ assignmentಗಳನ್ನು ನೋಟ್ಸ್ ರೂಪದಲ್ಲಿ ಅಧ್ಯಾಪಕರು ನೀಡುತ್ತಿದ್ದಾರೆಂದು ಆರೋಪಿಸಿದರು.<br><br>ಇದಕ್ಕುತ್ತರವಾಗಿ ಅಧ್ಯಕ್ಷರು ಪ್ರತಿಕ್ರಿಯಿಸಿ ಒಂದು ಸಮಿತಿಯನ್ನು ರಚಿಸಿ ಪರಿಶೀಲಿಸಿ ಮುಂದಿನ ಕ್ರಮ ಕೈಗೊಳ್ಳಲಾಗುವುದೆಂದರು. |
| **ತೀರ್ಮಾನ** | ದೂರ ಶಿಕ್ಷಣ ಕಾರ್ಯಕ್ರಮದ ಸ್ನಾತಕ/ಸ್ನಾತಕೋತ್ತರ ಕೋರ್ಸುಗಳ 1 ರಿಂದ 6 ಸೆಮಿಸ್ಟರ್‌ಗಳ ಸ್ವಯಂ ಕಲಿಕಾ ಸಾಮಾಗ್ರಿಗಳನ್ನು ರಚಿಸಿರುವ ಅಧ್ಯಾಪಕರುಗಳ ಪಟ್ಟಿಯನ್ನು ಸದರಿ ಕಾರ್ಯಕ್ರಮದ ಕೋ-ಆರ್ಡಿನೇಟರ್ ಸಹ ಕಾರ್ಯನಿರ್ವಹಿಸುತ್ತಿರುವ ಕುಲಸಚಿವ (ಪರೀಕ್ಷಾಂಗ) ಇವರು ಸಲ್ಲಿಸಿದ ನಂತರ ಗೌರವಧನ ನೀಡುವುದರ ಬಗ್ಗೆ ಮುಂದಿನ ಸಿಂಡಿಕೇಟ್ ಸಭೆಯಲ್ಲಿ ಚರ್ಚಿಸಿ, ನಿರ್ಧರಿಸಲು ಸಿಂಡಿಕೇಟ್ ತೀರ್ಮಾನಿಸಿತು. |
| **2020/10.10** | 2016-17ನೇ ಸಾಲಿನ ಮೈಸೂರು ವಿಶ್ವವಿದ್ಯಾನಿಲಯದ ವಾರ್ಷಿಕ ಲೆಕ್ಕಪರಿಶೋಧನಾ ವರದಿಯ ಆಕ್ಷೇಪಣೆಗಳಿಗೆ ಅನುಪಾಲನಾ ವರದಿ |
| **ತೀರ್ಮಾನ** | 2016-17ನೇ ಸಾಲಿನ ಮೈಸೂರು ವಿಶ್ವವಿದ್ಯಾನಿಲಯದ ವಾರ್ಷಿಕ ಲೆಕ್ಕಪರಿಶೋಧನಾ ವರದಿಯ ಆಕ್ಷೇಪಣೆಗಳಿಗೆ ಸಿದ್ಧಪಡಿಸಲಾದ ಅನುಪಾಲನಾ ವರದಿಯನ್ನು ಸಿಂಡಿಕೇಟ್ ಸಭೆಯು ಅನುಮೋದಿಸಿತು. |

| | |
|---|---|
| 2020/10.11 | ಪ್ರೊ. ಡಾ. ರುದ್ರಮ್ಮ ಚಿನ್ನದ ಪದಕ ದತ್ತಿಗಳನ್ನು ಸ್ಥಾಪನೆ ಮಾಡುವ ಬಗ್ಗೆ. |
| ತೀರ್ಮಾನ | ಶ್ರೀ ನಾಗೇಂದ್ರ ರವಣೀಕರ್, ನಂ. 2669/2, 2ನೇ ಮುಖ್ಯ ರಸ್ತೆ, ವಿ.ವಿ.ಮೊಹಲ್ಲಾ, ಮೈಸೂರು ಇವರು ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಕಾರ್ಯನಿರ್ವಹಿಸುತ್ತಿದ್ದ ಪ್ರೊ. ರುದ್ರಮ್ಮ, ನಿವೃತ್ತ ಪ್ರಾಧ್ಯಾಪಕರು ಇವರ ಸ್ಮರಣಾರ್ಥ ಎರಡು ಚಿನ್ನದ ಪದಕಗಳನ್ನು ಸ್ಥಾಪನೆ ಮಾಡಲು ದಾನಿಗಳು ತಲಾ ರೂ. 1,05,000/- ಗಳಂತೆ ಒಟ್ಟು ರೂ. 2,10,000/-ಗಳಂತೆ ಪಾವತಿಸಿ ಮುಂಬರುವ ನೂರನೇ ಘಟಿಕೋತ್ಸವದಲ್ಲಿಯೇ ಚಿನ್ನದ ಪದಕವನ್ನು ಪ್ರದಾನ ಮಾಡಲು ಕೋರಿದ್ದು ಅದರಂತೆ (1) M.Sc. Food Science and Nutrition (Stream 1).<br>(2) M.Sc. Human Development 'ಸ್ನಾತಕೋತ್ತರ ಪದವಿಗಳ ಕೋರ್ಸ್‌ಗಳಿಗೆ ಸಂಬಂಧಿಸಿದ ಆಯಾ ವಿಷಯ/ಪತ್ರಿಕೆಯಲ್ಲಿ ಪ್ರಥಮ ಬಾರಿಗೆ ತೇರ್ಗಡೆಯಾದ ಅತಿ ಹೆಚ್ಚು ಅಂಕಗಳಿಸಿದ ಅರ್ಹ ವಿದ್ಯಾರ್ಥಿಗೆ ದತ್ತಿ ನಿಯಮಗಳ ಅನುಸಾರ "ಪ್ರೊ. ಡಾ॥ ರುದ್ರಮ್ಮ ಚಿನ್ನದ ಪದಕ" ದತ್ತಿ ಸ್ಥಾಪನೆ ಮಾಡಲು ಸಿಂಡಿಕೇಟ್ ಅನುಮೋದಿಸಿತು. |
| 2020/10.12 | ಪ್ರೊ. ಜಿ.ಸುಬ್ರಮಣ್ಯ, ಪ್ರಾಧ್ಯಾಪಕರು (ನಿವೃತ್ತ), ರೇಷ್ಮೆ ಕೃಷಿ ವಿಜ್ಞಾನ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು. ಇವರನ್ನು 2020-21ನೇ ಸಾಲಿಗೆ ಸಂದರ್ಶಕ ಪ್ರಾಧ್ಯಾಪಕರನ್ನಾಗಿ ಆಹ್ವಾನಿಸುವ ಬಗ್ಗೆ. |
| ತೀರ್ಮಾನ : | ಪ್ರೊ.ಜಿ.ಸುಬ್ರಮಣ್ಯ, ಪ್ರಾಧ್ಯಾಪಕರು (ನಿವೃತ್ತ), ರೇಷ್ಮೆ ಕೃಷಿ ವಿಜ್ಞಾನ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು ರವರು ಜೆನೆಟಿಕ್ಸ್ ಮತ್ತು ಜಿನೋಮಿಕ್ಸ್ ಅಧ್ಯಯನ ವಿಭಾಗದಲ್ಲಿ ವಿಶೇಷ ತಜ್ಞತೆಯನ್ನು ಪಡೆದಿರುವುದರಿಂದ ಇವರನ್ನು 2020-21ನೇ ಸಾಲಿಗೂ ಸಂದರ್ಶಕ ಪ್ರಾಧ್ಯಾಪಕರನ್ನಾಗಿ ಆಹ್ವಾನಿಸಬೇಕೆಂದು ವಿಭಾಗಾಧ್ಯಕ್ಷರು, ಜೆನಿಟಿಕ್ಸ್ ಮತ್ತು ಜಿನೋಮಿಕ್ಸ್ ಅಧ್ಯಯನ ವಿಭಾಗ ಇವರು ಕೋರಿರುವ ವಿಷಯವನ್ನು ಸಿಂಡಿಕೇಟ್ ಸಭೆಯು ಪರಿಶೀಲಿಸಿ ಅನುಮೋದಿಸಿತು. |
| 2020/10.13 | ಡಾ. ವಿಶ್ವನಾಥ, ಸಹ ಪ್ರಾಧ್ಯಾಪಕರು, ಕನ್ನಡ ವಿಭಾಗ, ಮಹಾರಾಜ ಕಾಲೇಜು, ಮೈಸೂರು. ಇವರನ್ನು ಜವಾಹರ್‌ಲಾಲ್ ನೆಹರು ವಿಶ್ವವಿದ್ಯಾನಿಲಯ, ದೆಹಲಿಇಲ್ಲಿನ ಕನ್ನಡ ವಿಭಾಗಕ್ಕೆ ಪ್ರಾಧ್ಯಾಪಕರಾಗಿ (Tenure basis for the period of two years) ತೆರಳುವ ಹಿನ್ನೆಲೆಯಲ್ಲಿ ಕರ್ತವ್ಯದಿಂದ ಬಿಡುಗಡೆಗೊಳಿಸಿರುವ ಹಾಗೂ ಹುದ್ದೆಯ ಮೇಲಿನ ಹಕ್ಕನ್ನು ಕಾಯ್ದಿರಿಸುವ ಬಗ್ಗೆ. |
| | ಮಾನ್ಯ ಸದಸ್ಯರಾದ ಡಾ. ಈ.ಸಿ.ನಿಂಗರಾಜ್‌ಗೌಡರವರು ಮಾತನಾಡಿ ಡಾ. ವಿಶ್ವನಾಥ್, ಸಹ ಪ್ರಾಧ್ಯಾಪಕರು, ಕನ್ನಡ ವಿಭಾಗ, ಮಹಾರಾಜ ಕಾಲೇಜು, ಮೈಸೂರು ಇವರು ಜವಾಹರ್‌ಲಾಲ್ ನೆಹರ್ ವಿಶ್ವವಿದ್ಯಾನಿಲಯದಿಂದ ಪ್ರಾಧ್ಯಾಪಕರಾಗಿ ಕರ್ತವ್ಯ ನಿರ್ವಹಿಸಿಕೊಂಡು ವಾಪಸ್ಸು ಬಂದಾಗ ಮೊದಲು ಕರ್ತವ್ಯ ನಿರ್ವಹಿಸುತ್ತಿದ್ದ ಹುದ್ದೆಯಲ್ಲಿ ಇರುತ್ತಾರೆಯೇ ಎಂಬ ಬಗ್ಗೆ ಸ್ಪಷ್ಟೀಕರಣ ಬಯಸಿ ಘಟಕ ಕಾಲೇಜುಗಳ ಸಹ ಪ್ರಾಧ್ಯಾಪಕರುಗಳಿಗೆ, ಸಿ.ಎ.ಎಸ್.ನಲ್ಲಿ |

| | |
|---|---|
| | ಅಧ್ಯಾಪಕರಿಗೆ ಪದೋನ್ನತಿ ನೀಡುವಾಗ ಇವರಿಗೂ ಪದೋನ್ನತಿ ನೀಡಲು ಕ್ರಮವಹಿಸಬೇಕೆಂದು ಸಭೆಗೆ ಸೂಚಿಸಿದರು.<br>ನಂತರ, ಮಾನ್ಯ ಕುಲಪತಿಗಳು ಮಾತನಾಡಿ, ಸೆಪ್ಟೆಂಬರ್ 2020ನೇ ಮೊದಲನೇ ವಾರದಲ್ಲಿ ಸಮಿತಿಯನ್ನು ರಚಿಸಿ, ಸಿ.ಎ.ಎಸ್. ಮಾದರಿಯಲ್ಲಿ ಸ್ನಾತಕ ~~ಪೂರ್ವ~~ ಕಾಲೇಜಿನ ಅಧ್ಯಾಪಕರಿಗೆ ನಿಯಮಾನುಸಾರ ಪದೋನ್ನತಿ ನೀಡಲು ತೆಗೆದುಕೊಂಡಿರುವುದಾಗಿ ಸಭೆಗೆ ತಿಳಿಸಿದರು. |
| ತೀರ್ಮಾನ | ಮಾನ್ಯ ಕುಲಪತಿಗಳು, ಜವಾಹರ್‌ಲಾಲ್ ನೆಹರು ವಿಶ್ವವಿದ್ಯಾನಿಲಯ, ನವದೆಹಲಿ, ಇವರು ದಿನಾಂಕ 18-08-2020ರ ಪತ್ರದಲ್ಲಿ ತಿಳಿಸಿರುವಂತೆ, ಡಾ. ವಿಶ್ವನಾಥ, ಸಹ ಪ್ರಾಧ್ಯಾಪಕರು, ಕನ್ನಡ ವಿಭಾಗ, ಮಹಾರಾಜ ಕಾಲೇಜು ಅವರಿಗೆ, ಜವಾಹರ್‌ಲಾಲ್ ನೆಹರು ವಿಶ್ವವಿದ್ಯಾನಿಲಯದ "Kannada Language Chair in the Centre for Indian Languages, School of Languages, Literature and Culture Studies"ನಲ್ಲಿ ಪ್ರಾಧ್ಯಾಪಕ ಹುದ್ದೆಯಲ್ಲಿ ಅಕ್ಟೋಬರ್ 01-10-2020ರಿಂದ ಕರ್ತವ್ಯ ನಿರ್ವಹಿಸಲು ಅನುವಾಗುವಂತೆ ಈಗಾಗಲೇ ಶ್ರೀಯುತರನ್ನು ದಿನಾಂಕ 30-09-2020 ರಂದು ಸೇವೆಯಿಂದ ಬಿಡುಗಡೆಗೊಳಿಸಿರುವ ಕ್ರಮವನ್ನು ಅನುಸಮರ್ಥಿಸಿದ ಸಿಂಡಿಕೇಟ್ ಈ ಎರಡು ವರ್ಷಗಳವರೆಗಿನ ನಿಯೋಜನೆ ಮಾಡಲು ಪ್ರಸ್ತುತ ಅವರ ಹುದ್ದೆಯ ಮೇಲಿನ ಹಕ್ಕನ್ನು (ಲೀನ್) ನಿಯಮಾನುಸಾರ ಕಾಯ್ದಿರಿಸಲು ಅನುಮೋದಿಸಿತು. |
| **2020/10.14** | Vogue Institute of Fashion Technology (A Unit of Manduda Educational Trust), Bengaluru ಇವರು Specialized Programme ಅಡಿಯಲ್ಲಿ ನಡೆಸುತ್ತಿರುವ ವಿವಿಧ ಕೋರ್ಸುಗಳ ವಿಳಾಸ ಬದಲಾವಣೆ ಸಂಬಂಧ ಪರಿವೀಕ್ಷಣಾ ಸಮಿತಿ ಸಲ್ಲಿಸಿರುವ ವರದಿಗೆ ಅನುಮೋದನೆ ಕೋರುವ ಬಗ್ಗೆ. |
| ತೀರ್ಮಾನ | ದಿನಾಂಕ 29-09-2020ರಂದು ಪರಿವೀಕ್ಷಣಾ ಸಮಿತಿಯು ಸದರಿ ಸಂಸ್ಥೆಯನ್ನು ಸಂದರ್ಶಿಸಿ ಸಂಸ್ಥೆಯ ಮೂಲಭೂತ ಸೌಕರ್ಯಗಳನ್ನು ಪರಿಶೀಲಿಸಿ Vogue Institute of Fashion Technology, (A Unit of Manduda Educational Trust), Campus: Plat No. SW45, 2nd Phase, Apparel park, Doddaballapur Road, Bengaluru ಸಂಸ್ಥೆಯು ಪ್ರಸ್ತುತ ಇರುವ ಸ್ಥಳದಿಂದ Voguel Institute of Fashion Technology, C/o A.D.Biligowda First Grade College, Koppa-571425, Maddur Tq., Mandya District" ವಿಳಾಸಕ್ಕೆ ಬದಲಾವಣೆ ಮಾಡಿಕೊಳ್ಳಲು ಪರಿವೀಕ್ಷಣಾ ಸಮಿತಿಯು ಸಲ್ಲಿಸಿರುವ ವರದಿಯನ್ನು ಸಿಂಡಿಕೇಟ್ ಅನುಮೋದಿಸಿತು. |
| **2020/10.15** | ಮರಿಯನ್ ಇನ್ಸ್ಟಿಟ್ಯೂಟ್ ಆಫ್ ಪ್ರೊಫೆಷನಲ್ ಸ್ಟಡೀಸ್, ಎಂ.ಐ.ಟಿ. ಆವರಣ, ಬೆಳವಾಡಿ, ಶ್ರೀರಂಗಪಟ್ಟಣ, ಮಂಡ್ಯ ಜಿಲ್ಲೆ, ಇವರ ಸಂಸ್ಥೆಯಲ್ಲಿ Specialized |

| | |
|---|---|
| | Programme ಅಡಿಯಲ್ಲಿ 02 ಕೋರ್ಸ್‌ಗಳನ್ನು ಪ್ರಾರಂಭಿಸಲು ವಿಶ್ವವಿದ್ಯಾನಿಲಯದ ಪರಿವೀಕ್ಷಣಾ ಸಮಿತಿಯು ಸಲ್ಲಿಸಿರುವ ವರದಿಗೆ ಅನುಮೋದನೆ ಕೋರುವ ಬಗ್ಗೆ. |
| ತೀರ್ಮಾನ | ದಿನಾಂಕ 29-09-2020ರಂದು ಪರಿವೀಕ್ಷಣಾ ಸಮಿತಿಯು ಸದರಿ ಸಂಸ್ಥೆಯನ್ನು ಸಂದರ್ಶಿಸಿ ಸಲ್ಲಿಸಿದ ಪರಿವೀಕ್ಷಣಾ ಸಮಿತಿಯ ಶಿಫಾರಸ್ಸಿನ ಅನ್ವಯ, Marian Institute of Professional Studies, MIT, Belawadi, Srirangapatna, Mandya-571 438, ಇವರ ಸಂಸ್ಥೆಗೆ Specialized Programmeಅಡಿಯಲ್ಲಿ 1. BBA (Airline & Airport Management) 2. BBA (Costume Design & Fashion Technology) ಕೋರ್ಸುಗಳನ್ನು 40 ಪ್ರವೇಶಾತಿಗಳ ಸಂಖ್ಯಾಮಿತಿಯೊಂದಿಗೆ ಪ್ರಾರಂಭಿಸಲು ಮಾನ್ಯತೆ ನೀಡುವ ಬಗೆಗಿನ ಪ್ರಸ್ತಾವನೆಯನ್ನು ಸಿಂಡಿಕೇಟ್ ಸಭೆಯು ಪರಿಶೀಲಿಸಿ, ಅನುಮೋದಿಸಿತು. |
| **2020/10.16** | 2021 ಕ್ಯಾಲೆಂಡರ್ ವರ್ಷದಲ್ಲಿ ವಯೋಮಾನ ತಲುಪಿ ನಿವೃತ್ತರಾಗುವ ನೌಕರರಿಗೆ ಅನುಮತಿ ನೀಡುವ ಬಗ್ಗೆ. |
| | ಮಾನ್ಯ ಸದಸ್ಯರಾದ ಪ್ರೊ. ಎಸ್.ಡಿ.ದೊಡ್ಡಚಾರಿಯವರು ಮಾತನಾಡಿ ನಿವೃತ್ತರಾಗುವ ನೌಕರರುಗಳಿಗೆ ನಿವೃತ್ತಿ ಸೌಲಭ್ಯಗಳು ಸಕಾಲದಲ್ಲಿ ದೊರೆಯುತ್ತಿಲ್ಲವೆಂದು ಕೆಲ ನಿವೃತ್ತ ಉದ್ಯೋಗಿಗಳು ಆರೋಪಿಸುತ್ತಿರುವುದನ್ನು ಸಭೆಯ ಗಮನಕ್ಕೆ ತಂದರು.<br>ಕುಲಸಚಿವರು ಮಾತನಾಡಿ, ನಿವೃತ್ತರಾದ ಅಧ್ಯಾಪಕೇತರರ ನೌಕರರುಗಳಿಗೆ ಯಾವುದೇ ರೀತಿಯ ತೊಂದರೆಯಾಗಿರುವುದಿಲ್ಲ, ಆದರೆ ಕೆಲವು ನಿವೃತ್ತ ಬೋಧಕ ವರ್ಗದವರು ಸಕಾಲದಲ್ಲಿ ಬೇಬಾಕಿ ಪತ್ರ ಅಥವಾ ಇನ್ನಿತರೆ ಅಗತ್ಯ ದಾಖಲೆಗಳನ್ನು ಸಲ್ಲಿಸದೇ ಇರುವುದರಿಂದ ವಿಳಂಬವಾಗಿದೆಯೆಂದು ಸಭೆಗೆ ವಿವರಿಸಿದರು. |
| ತೀರ್ಮಾನ | ಮೈಸೂರು ವಿಶ್ವವಿದ್ಯಾನಿಲಯದ ವಿವಿಧ ವಿಭಾಗ/ಕಛೇರಿಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಅಧಿಕಾರಿಗಳು/ಅಧ್ಯಾಪಕೇತರರು ಹಾಗೂ ತಾಂತ್ರಿಕ ವರ್ಗದ ಉದ್ಯೋಗಿಗಳು 2021ನೇ ಕ್ಯಾಲೆಂಡರ್ ವರ್ಷದಲ್ಲಿ ನಿವೃತ್ತಿ ವಯೋಮಾನ ತಲುಪುತ್ತಿರುವುದರಿಂದ ಈ ಉದ್ಯೋಗಿಗಳು ವಿಶ್ವವಿದ್ಯಾನಿಲಯದ ಸೇವೆಯಿಂದ ನಿವೃತ್ತರಾಗುವುದಕ್ಕೆ ಸಿಂಡಿಕೇಟ್ ಸಭೆಯು ಅನುಮತಿಸಲು ನಿರ್ಧರಿಸಿತು. |
| **2020/10.17** | ಏಷಿಯನ್ ಪಾಲಿಮರ್ಸ್, ಸಂಖ್ಯೆ.65/ಸಿ, ಕೆ.ಐ.ಎ.ಡಿ.ಬಿ., ಕೈಗಾರಿಕಾ ಪ್ರದೇಶ ತೂಬಿನಕೆರೆ, ಮಂಡ್ಯ ಇವರು ವಿಶ್ವವಿದ್ಯಾನಿಲಯದೊಂದಿಗೆ ಒಡಂಬಡಿಕೆ ಮಾಡಿಕೊಳ್ಳುವ ಬಗ್ಗೆ. |
| ತೀರ್ಮಾನ | ಏಷಿಯನ್ ಪಾಲಿಮರ್ಸ್, ಸಂಖ್ಯೆ 65/ಸಿ, ಕೆ.ಐ.ಎ.ಡಿ.ಬಿ., ಕೈಗಾರಿಕಾ ಪ್ರದೇಶ, ತೂಬಿನಕೆರೆ, ಮಂಡ್ಯ ಇವರು ವಿಶ್ವವಿದ್ಯಾನಿಲಯದ ಮಂಡ್ಯ ಸ್ನಾತಕೋತ್ತರ ಕೇಂದ್ರದ ವಿದ್ಯಾರ್ಥಿಗಳ ಹಾಗೂ ಸಂಶೋಧನಾ ವಿದ್ಯಾರ್ಥಿಗಳ |

| | |
|---|---|
| | ಅನುಕೂಲಕ್ಕಾಗಿ ಕೆಲವು ಉಪಕರಣಗಳನ್ನು ನೀಡಲು ಕೋರಿರುವ ವಿಷಯವನ್ನು ಪರಿಶೀಲಿಸಿದ ಸಿಂಡಿಕೇಟ್ ಈ ಸಂಬಂಧ, ವಿಶ್ವವಿದ್ಯಾನಿಲಯದೊಂದಿಗೆ ಒಡಂಬಡಿಕೆ ಮಾಡಿಕೊಳ್ಳಲು ನಿರ್ಣಯಿಸಿತು. |
| **2020/10.18** | ದಿನಾಂಕ: 29-09-2020ರಂದು ಜರುಗಿದ ಕಟ್ಟಡ ಸಮಿತಿ ಸಭೆಯ ನಡಾವಳಿಯನ್ನು ವಿಶ್ವವಿದ್ಯಾನಿಲಯದ ಸಿಂಡಿಕೇಟ್ ಸಭೆಯ ತೀರ್ಮಾನಕ್ಕಾಗಿ. |
| ತೀರ್ಮಾನ | ದಿನಾಂಕ: 29-09-2020ರಂದು ಜರುಗಿದ ಕಟ್ಟಡ ಸಮಿತಿ ಸಭೆಯ ನಡಾವಳಿಯನ್ನು ಸಿಂಡಿಕೇಟ್ ಅನುಮೋದಿಸಿತು. |
| **2020/10.19** | ಆರ್. ಪ್ರದೀಪ್ ಕುಮಾರ್ ದೀಕ್ಷಿತ್, ಸಿಂಡಿಕೇಟ್ ಸದಸ್ಯರು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಇವರು ಡ್ರಗ್ಸ್-ಗಾಂಜಾ ಇತ್ಯಾದಿ ದ್ರವ್ಯದಿಂದಾಗುವ ಹಾನಿಯ ಬಗ್ಗೆ ಜಾಗೃತಿ ಕಾರ್ಯಕ್ರಮ ಹಾಗೂ ಇವುಗಳನ್ನು ತಡೆಗಟ್ಟುವಲ್ಲಿ ಮತ್ತು ಸೂಕ್ಷ್ಮ ಗಮನಹರಿಸುವಲ್ಲಿ ವಿಶ್ವವಿದ್ಯಾನಿಲಯದ ವತಿಯಿಂದ ಒಂದು ವಿಶೇಷ ತಂಡ ರಚಿಸುವಂತೆ ತಿಳಿಸಿರುವ ವಿಷಯದ ಬಗ್ಗೆ ಸಿಂಡಿಕೇಟ್ ಸಭೆಯ ಪರಿಶೀಲನೆಗೆ ಮತ್ತು ತೀರ್ಮಾನಕ್ಕಾಗಿ ಮಂಡಿಸಿದೆ. |
| ತೀರ್ಮಾನ | ಆರ್. ಪ್ರದೀಪ್ ಕುಮಾರ್ ದೀಕ್ಷಿತ್, ಸಿಂಡಿಕೇಟ್ ಸದಸ್ಯರು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಇವರು ಡ್ರಗ್ಸ್-ಗಾಂಜಾ ಇತ್ಯಾದಿ ದ್ರವ್ಯದಿಂದಾಗುವ ಹಾನಿಯ ಬಗ್ಗೆ ಜಾಗೃತಿ ಕಾರ್ಯಕ್ರಮ ಹಾಗೂ ಇವುಗಳನ್ನು ತಡೆಗಟ್ಟುವಲ್ಲಿ ಮತ್ತು ಸೂಕ್ಷ್ಮ ಗಮನಹರಿಸುವಲ್ಲಿ ವಿಶ್ವವಿದ್ಯಾನಿಲಯದ ವತಿಯಿಂದ ಒಂದು ವಿಶೇಷ ತಂಡ ರಚಿಸುವಂತೆ ತಿಳಿಸಿರುವ ವಿಷಯದ ಬಗ್ಗೆ ಸಿಂಡಿಕೇಟ್ ಸಭೆಯು ಈ ಕೆಳಕಂಡಂತೆ ಕೂಲಂಕಷವಾಗಿ ಚರ್ಚಿಸಿ ತೀರ್ಮಾನವನ್ನು ಕೈಗೊಂಡಿತು.<br>1. ಡ್ರಗ್ಸ್-ಗಾಂಜಾ ಇತ್ಯಾದಿ ಮಾದಕ ದ್ರವ್ಯದಿಂದಾಗುವ ಹಾನಿಯ ಬಗ್ಗೆ ಜಾಗೃತಿ ಕಾರ್ಯಕ್ರಮವನ್ನು ವಿಶ್ವವಿದ್ಯಾನಿಲಯದ ಕ್ಯಾಂಪಸ್‌ನಲ್ಲಿ ಹಮ್ಮಿಕೊಳ್ಳುವುದು ಹಾಗೂ ಇವುಗಳನ್ನು ತಡೆಗಟ್ಟುವಲ್ಲಿ ಮತ್ತು ಇದರ ಬಗ್ಗೆ ಸೂಕ್ತಗಮನಹರಿಸುವಲ್ಲಿ ವಿಶ್ವವಿದ್ಯಾನಿಲಯದ ವತಿಯಿಂದ ಅಧ್ಯಾಪಕರು, ನಿಲಯಪಾಲಕರು ಮತ್ತು ಸಿಂಡಿಕೇಟ್ ಸದಸ್ಯರುಗಳನ್ನೊಳಗೊಂಡಂತೆ ಒಂದು ವಿಶೇಷ ತಂಡವನ್ನು ರಚಿಸಿ ಕ್ರಮ ಕೈಗೊಳ್ಳಬೇಕೆಂದು ಆರ್. ಪ್ರದೀಪ್ ಕುಮಾರ್ ದೀಕ್ಷಿತ್‌ರವರು ಸಭೆಯನ್ನು ಕೋರಿದರು.<br>2. ಮಾನ್ಯ ಸದಸ್ಯರಾದ ಡಾ. ಈ.ಸಿ.ನಿಂಗರಾಜ್ ಗೌಡರವರು ಮಾತನಾಡಿ, ವಿದ್ಯಾರ್ಥಿಗಳ ಪ್ರವೇಶಾತಿ ಪ್ರಾರಂಭವಾದ ನಂತರ, ವಸತಿ ನಿಲಯಗಳಲ್ಲಿ ವಿದ್ಯಾರ್ಥಿಗಳನ್ನು ಸೂಕ್ಷ್ಮವಾಗಿ ಗಮನಹರಿಸಿ, ಡ್ರಗ್ಸ್-ಗಾಂಜಾ ಇತ್ಯಾದಿ ಮಾದಕ ದ್ರವ್ಯದಿಂದಾಗುವ ಹಾನಿಯ ಬಗ್ಗೆ ಜಾಗೃತಿ ಕಾರ್ಯಕ್ರಮ ಕೈಗೊಂಡು, ಮಾದಕ ವಸ್ತು ಕಾಯ್ದೆಯನ್ನು ಕಟ್ಟುನಿಟ್ಟಾಗಿ ಜಾರಿಗೆ ತರಬೇಕೆಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದರು.<br>ಮಾನ್ಯ ಸದಸ್ಯರ ಅಭಿಪ್ರಾಯವನ್ನು ಸಭೆಯು ಅನುಮೋದಿಸಿತು. |

3. ಮಾನ್ಯ ಸದಸ್ಯರಾದ ಶ್ರೀ ಎಸ್.ಡಿ.ದೊಡ್ಡಚಾರಿಯವರು ಮಾತನಾಡಿ, ವಿಶ್ವವಿದ್ಯಾನಿಲಯದ ಮಾನಸಗಂಗೋತ್ರಿ ಕ್ಯಾಂಪಸ್‌ನ್ನು ಚಲನಚಿತ್ರ ಚಿತ್ರೀಕರಣಕ್ಕಾಗಿ ಅನುಮತಿ ನೀಡಲಾಗಿದ್ದು, ವಾಯುವಿಹಾರಿಗಳಿಗೆ ನಿಷೇಧ ವ್ಯಕ್ತಪಡಿಸಿರುವುದನ್ನು ಸಭೆಯ ಗಮನಕ್ಕೆ ತಂದರು.

ಕುಲಸಚಿವರು ಮಾತನಾಡಿ, ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಕೋವಿಡ್-19ರಿಂದಾಗಿ ಮಾನಸಗಂಗೋತ್ರಿ ಕ್ಯಾಂಪಸ್‌ನಲ್ಲಿ ವಾಯುವಿಹಾರವನ್ನು ನಿಷೇಧಿಸಲಾಗಿದ್ದು, ನಿಬಂಧನೆಗಳೊಂದಿಗೆ ಶೈಕ್ಷಣಿಕ ಚಿತ್ರೀಕರಣಕ್ಕಾಗಿ ಎರಡು ದಿವಸಗಳಿಗೆ ಮಾತ್ರ ಮಾನಸಗಂಗೋತ್ರಿ ಕ್ಯಾಂಪಸ್‌ನಲ್ಲಿ ಸ್ಥಳಾವಕಾಶವನ್ನು ನೀಡಲಾಗಿದೆ ಎಂದು ತಿಳಿಸಿದರು.

ನಂತರ ಸಭೆಯು ಕುಲಸಚಿವರ ನಿರ್ಣಯವನ್ನು ಅನುಮೋದಿಸಿತು.

4. ಶ್ರೀ ಆರ್.ಪ್ರದೀಪ್ ಕುಮಾರ್ ದೀಕ್ಷಿತ್ ಅವರು ಮೈಸೂರು ವಿಶ್ವವಿದ್ಯಾನಿಲಯದಲ್ಲಿ ವ್ಯಾಸ-ವಾಲ್ಮೀಕಿ ಅಧ್ಯಯನ ಪೀಠವನ್ನು ಸ್ಥಾಪಿಸಲು ಕೋರಿ ಸಲ್ಲಿಸಲಾದ ಪ್ರಸ್ತಾವನೆಗೆ ಸಂಬಂಧಿಸಿದಂತೆ ಕುಲಸಚಿವರು 'ಈ ಸಂಬಂಧವಾಗಿ ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಈಗಾಗಲೇ ಶ್ರೀ **ಮಹರ್ಷಿ ವಾಲ್ಮೀಕಿಯವರ ಅಧ್ಯಯನ ಪೀಠ** ಸ್ಥಾಪಿಸುವ ಸಂಬಂಧ ಸನ್ಮಾನ್ಯ ಶ್ರೀ ಪ್ರತಾಪ್ ಸಿಂಹ, ಲೋಕಸಭಾ ಸದಸ್ಯರು, ಸನ್ಮಾನ್ಯ ಶ್ರೀ ಎಲ್.ನಾಗೇಂದ್ರ, ವಿಧಾನಸಭಾ ಸದಸ್ಯರು ಹಾಗೂ ಪಡುವಾರಹಳ್ಳಿ ಎಂ. ರಾಮಕೃಷ್ಣ, ಮೈಸೂರು ನಾಯಕರ ಪಡೆ ಇವರುಗಳ ಕೋರಿಕೆಗೆ ಅನುಗುಣವಾಗಿ ಸರ್ಕಾರದ ಅನುಮತಿಗಾಗಿ ಹಾಗೂ ಅನುದಾನ ಬಿಡುಗಡೆ ಕೋರಿ ವಿಶ್ವವಿದ್ಯಾನಿಲಯದಿಂದ ಪತ್ರ ವ್ಯವಹರಿಸಲಾಗಿತ್ತು. ಈ ಸಂಬಂಧವಾಗಿ ದಿನಾಂಕ 01-07-2020ರಂದು ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು ಪತ್ರದಲ್ಲಿ **"ಈಗಾಗಲೇ ವಾಲ್ಮೀಕಿ ಅಧ್ಯಯನ ಪೀಠವು ಗುಲ್ಬರ್ಗ ವಿಶ್ವವಿದ್ಯಾನಿಲಯದಲ್ಲಿ ಕಾರ್ಯನಿರ್ವಹಿಸುತ್ತಿರುವುದರಿಂದ, ಪ್ರಸ್ತಾವನೆಯ ಮುಖ್ಯ ಉದ್ದೇಶ, ಹುದ್ದೆಗಳ ಸೃಜನೆಯಾಗಿರುವುದರಿಂದ ಹಾಗೂ ಪ್ರಸ್ತುತ ಆರ್ಥಿಕ ನಿರ್ಬಂಧಗಳು ಜಾರಿಯಲ್ಲಿರುವುದರಿಂದ ಪ್ರಸ್ತಾವನೆಯನ್ನು ಪರಿಗಣಿಸಲು ಸಾಧ್ಯವಿಲ್ಲವೆಂದು ತಿಳಿಸಿರುತ್ತಾರೆ"** ಎಂದು ಸಭೆಯಲ್ಲಿ ವಿವರಿಸಿದರು.

ಅಂತಿಮವಾಗಿ ಮೈಸೂರು ವಿಶ್ವವಿದ್ಯಾನಿಲಯದಲ್ಲಿ ವ್ಯಾಸ ಹಾಗೂ ವಾಲ್ಮೀಕಿ ಇಬ್ಬರು ಮಹನಿಯರೊನ್ನೊಳಗೊಂಡಂತೆ ಆಳವಾಗಿ, ತುಲನಾತ್ಮಕವಾಗಿ ಅಧ್ಯಯನ ನಡೆಸಲು ಹಾಗೂ ಅಧ್ಯಯನ ಪೀಠ ಸ್ಥಾಪನೆಗೆ ಅಗತ್ಯ ಅನುದಾನ ಬಿಡುಗಡೆಗಾಗಿ ಹಾಗೂ ಅನುಮೋದನೆಯನ್ನು ಕೋರಿ ಮತ್ತೊಮ್ಮೆ ಸರ್ಕಾರಕ್ಕೆ ಪತ್ರ ವ್ಯವಹರಿಸಲು ಸಭೆ ತೀರ್ಮಾನಿಸಿತು.

5. ಮೈಸೂರು ವಿಶ್ವವಿದ್ಯಾನಿಲಯದ ವ್ಯಾಪ್ತಿಯಲ್ಲಿ ಬರುವ ವಿದ್ಯಾಸಂಸ್ಥೆಗಳಲ್ಲಿ ರಾಷ್ಟ್ರೀಯ ಶಿಕ್ಷಣ ನೀತಿ ಅನುಷ್ಠಾನ ಹಾಗೂ ಕಾರ್ಯರೂಪಕ್ಕೆ ತರುವಲ್ಲಿ ಕಾರ್ಯನಿರ್ವಹಿಸಲು ಸಿಂಡಿಕೇಟ್ ಸದಸ್ಯರು ಹಾಗೂ ಶಿಕ್ಷಣ ತಜ್ಞರನ್ನೊಳಗೊಂಡಂತೆ ಒಂದು ತಂಡ ಟಾಸ್ಕಫೋರ್ಸ್ ರಚಿಸುವಂತೆ

| | |
|---|---|
| | ಮಾನ್ಯ ಸದಸ್ಯರಾದ ಶ್ರೀ ಆರ್.ಪ್ರದೀಪ್ ಕುಮಾರ್ ದೀಕ್ಷಿತ್ ರವರ ಮನವಿಯನ್ನು ಸಿಂಡಿಕೇಟ್ ಸಭೆಯು ಪುರಸ್ಕರಿಸಿತು.<br><br>6. ಮಾನ್ಯ ಸದಸ್ಯರಾದ ಡಾ. ಈ.ಸಿ.ನಿಂಗರಾಜ್ ಗೌಡರವರು ರಾಷ್ಟ್ರೀಯ ಶಿಕ್ಷಣ ನೀತಿ ಅನುಷ್ಠಾನ ಕುರಿತು ಮಾತನಾಡಿ, ನಮ್ಮ ವಿಶ್ವವಿದ್ಯಾನಿಲಯವು ಇತರ ವಿಶ್ವವಿದ್ಯಾನಿಲಯಕ್ಕೆ ಮಾದರಿಯಾಗಬೇಕಾದರೆ, ವಿಶ್ವವಿದ್ಯಾನಿಲಯದ ವ್ಯಾಪ್ತಿಯಲ್ಲಿ ಬರುವ ಕಾಲೇಜುಗಳ ಪ್ರಾಂಶುಪಾಲರುಗಳ ನೇತೃತ್ವದಲ್ಲಿ ಆಯಾ ಕಾಲೇಜುಗಳಲ್ಲಿ ಸೆಮಿನಾರ್‌ಗಳನ್ನು ನಡೆಸುವುದು ಹಾಗೂ ವಿದ್ಯಾರ್ಥಿಗಳ ಭವಿಷ್ಯಕ್ಕಾಗಿ ವಿಶ್ವವಿದ್ಯಾನಿಲಯದ ವತಿಯಿಂದ ವೃತ್ತಿಆಧಾರಿತ ಕೋರ್ಸುಗಳನ್ನು ತೆರೆಯಬೇಕೆಂದು ಸಭೆಯನ್ನು ಆಗ್ರಹಿಸಿದರು. ಮುಂದುವರೆದು ಶಿಕ್ಷಣ ನೀತಿಯ ಕರಡು ಪ್ರತಿ ಆಂಗ್ಲ ಹಾಗೂ ಹಿಂದಿ ಭಾಷೆಯಲ್ಲಿದ್ದು, ಕರ್ನಾಟಕದ ಆಡಳಿತ ಭಾಷೆ ಕನ್ನಡವಾಗಿರುವುದರಿಂದ ವಿಷಯವನ್ನು ಕನ್ನಡಕ್ಕೆ ತರ್ಜುಮೆ ಮಾಡಿ, ಮೈಸೂರು ವಿಶ್ವವಿದ್ಯಾನಿಲಯದ ಮುದ್ರಣ ಘಟಕದಿಂದ ಮುದ್ರಿಸಿ ಪ್ರಕಟಿಸಲು ಕ್ರಮ ಕೈಗೊಳ್ಳುವಂತೆ ಸೂಚಿಸಿದರು.<br><br>ಮೈಸೂರು ವಿಶ್ವವಿದ್ಯಾನಿಲಯದ ನಿವೃತ್ತ ಪ್ರಾಧ್ಯಾಪಕರಾದ ಪ್ರೊ. ನಾಗಣ್ಣರವರನ್ನೊಳಗೊಂಡ ತಂಡವನ್ನು ರಚಿಸಿ ಹಿಂದಿ ಹಾಗೂ ಆಂಗ್ಲ ಭಾಷೆಯಿಂದು ಕನ್ನಡಕ್ಕೆ ತರ್ಜುಮೆ ಮಾಡುವ ಕಾರ್ಯವನ್ನು ತಂಡಕ್ಕೆ ವಹಿಸಲು ಕ್ರಮ ಕೈಗೊಳ್ಳುವುದಾಗಿ ಮಾನ್ಯ ಕುಲಪತಿಯವರು ಸಭೆಯ ಅಭಿಪ್ರಾಯವನ್ನು ಕೇಳಿದಾಗ ಸಭೆಯು ಅನುಮೋದಿಸಿತು. |
| **2020/10.20** | ಪರೀಕ್ಷಾ ಭವನ ಮತ್ತು ಮೌಲ್ಯಭವನ ಕಟ್ಟಡಗಳಿಗೆ Fire & Safety ಉಪಕರಣಗಳನ್ನು ಅಳವಡಿಸುವ ಬಗೆಗೆ. |
| **ತೀರ್ಮಾನ** | ವಿಶ್ವವಿದ್ಯಾನಿಲಯಕ್ಕೆ ನ್ಯಾಕ್ ಸಮಿತಿಯು ಭೇಟಿ ನೀಡುತ್ತಿರುವ ಹಿನ್ನೆಲೆಯಲ್ಲಿ ಪರೀಕ್ಷಾ ಭವನವನ್ನು ಉನ್ನತೀಕರಣಗೊಳಿಸುವ ಸಂಬಂಧ ಈಗಾಗಲೇ ಎಲ್ಲಾ ಪರೀಕ್ಷಾ ಚಟುವಟಿಕೆಗಳನ್ನು ಡಿಜಲೀಕರಣಗೊಳಿಸಲಾಗಿದ್ದು ಅದರಂತೆ ಈ ಎಲ್ಲಾ ಸೌಲಭ್ಯಗಳ ಸುರಕ್ಷತಾ ದೃಷ್ಟಿಯಿಂದ ಪರೀಕ್ಷಾ ಭವನ ಮತ್ತು ಮೌಲ್ಯಭವನ ಕಟ್ಟಡಗಳಿಗೆ Fire & Safety ಉಪಕರಣಗಳನ್ನು ಕೆಟಿಪಿಪಿ ನಿಯಮಾನುಸಾರ ಅಳವಡಿಸಲು ಸಿಂಡಿಕೇಟ್ ಸದಸ್ಯರನ್ನೊಳಗೊಂಡ ಸಮಿತಿಯನ್ನು ರಚಿಸುವುದು ಹಾಗೂ ಕಾರ್ಯಪಾಲಕ ಅಭಿಯಂತರರಿಗೆ ಹದಿನೈದು ದಿವಸಗಳ ಅವಧಿಯೊಳಗೆ ಮೇಲ್ಕಂಡ ಕಟ್ಟಡದ ಹೊರ ಹಾಗೂ ಒಳ ಭಾಗಗಳಲ್ಲಿರುವ ವಿದ್ಯುತ್ ವೈರ್‌ಗಳನ್ನು ಸಮರ್ಪಕವಾಗಿ ಅಳವಡಿಸುವಂತೆ ಒಂದು ಟಿಪ್ಪಣಿಯನ್ನು ಹೊರಡಿಸುವ ತೀರ್ಮಾನವನ್ನು ಸಿಂಡಿಕೇಟ್ ಸಭೆಯು ನಿರ್ಣಯಿಸಿತು. |

**ಇತರೆ ವಿಷಯಗಳು:**

1. ಮಾನ್ಯ ಸದಸ್ಯರುಗಳಾದ ಡಾ. ಎಂ.ಎಸ್.ದಾಮೋದರ ಹಾಗೂ ಶ್ರೀ ಎಸ್.ಡಿ.ದೊಡ್ಡಚಾರಿಯವರು ಮಾತನಾಡಿ, ಸಿಂಡಿಕೇಟ್ ಸದಸ್ಯರುಗಳಿಗೆ ನೀಡಿರುವ ಕೊಠಡಿಗೆ ಪೀಠೋಪಕರಣಗಳನ್ನು ಅಳವಡಿಸುವಂತೆ ಸಭೆಯನ್ನು ಕೋರಿದರು.

   ಸಭೆಯು ಮಾನ್ಯ ಸದಸ್ಯರ ಮನವಿಯನ್ನು ಪರಿಗಣಿಸಿದ ಸಿಂಡಿಕೇಟ್ ನಿಯಮನುಸಾರ ತಕ್ಷಣವೇ ಕ್ರಮಕೈಗೊಳ್ಳಲು ಸಿಂಡಿಕೇಟ್ ತೀರ್ಮಾನಿಸಿತು.
2. ಮಾನ್ಯ ಸದಸ್ಯರಾದ ಡಾ. ಈ.ಸಿ.ನಿಂಗರಾಜ್‌ಗೌಡ ರವರು ಮಾತನಾಡಿ, ಸಿಂಡಿಕೇಟ್ ಸಭೆಯಲ್ಲಿನ ತೀರ್ಮಾನದ ನಡಾವಳಿಯನ್ನು ವಿಶ್ವವಿದ್ಯಾನಿಲಯದ ವೆಬ್‌ಸೈಟ್‌ನಲ್ಲಿ ಪ್ರಕಟಿಸಬೇಕೆಂದು ಸಭೆಗೆ ತಿಳಿಸಿದರು.

   ಮಾನ್ಯ ಸದಸ್ಯರ ಸಲಹೆಯನ್ನು ಪರಿಗಣಿಸಿದ ಸಭೆಯು ಈಗಾಗಲೇ ಸಿಂಡಿಕೇಟ್ ಸಭೆಯಲ್ಲಿ ದೃಢೀಕರಿಸಿದ ನಂತರ ವಿಶ್ವವಿದ್ಯಾನಿಲಯದ ವೆಬ್‌ಸೈಟ್ ಪ್ರಕಟಿಸಲಾಗುತ್ತಿದೆ. ಆದಾಗ್ಯೂ ಕಾಲಕಾಲಕ್ಕೆ ನಡವಳಿಗಳು ಅಪ್‌ಲೋಡ್ ಆಗುವಲ್ಲಿ ಗಮನಹರಿಸಲಾಗುವುದೆಂದು ಕುಲಸಚಿವರು ಸಭೆಯ ಗಮನಕ್ಕೆ ತಂದರು.
3. ಮಾನ್ಯ ಸದಸ್ಯರಾದ ಶ್ರೀ ಆರ್.ಪ್ರದೀಪ್‌ಕುಮಾರ್ ದೀಕ್ಷಿತ್‌ರವರು ಮಾತನಾಡಿ ಸಿಂಡಿಕೇಟ್ ಸಭೆಯ ನಡಾವಳಿಯಲ್ಲಿ ಚರ್ಚೆ ಮಾಡಿರುವ ವಿಷಯಗಳಲ್ಲಿ ಸಿಂಡಿಕೇಟ್ ಸದಸ್ಯರುಗಳ ಹೆಸರುಗಳನ್ನು ನಮೂದಿಸಬೇಕೆಂದು ಸಭೆಗೆ ತಿಳಿಸಿದಾಗ ಸಭೆಯು ಮಾನ್ಯ ಸದಸ್ಯರ ಸಲಹೆಯನ್ನು ಪುರಸ್ಕರಿಸಿತು.
4. ಮಾನ್ಯ ಸದಸ್ಯರಾದ ಡಾ. ಈ.ಸಿ.ನಿಂಗರಾಜ್‌ಗೌಡರವರು ಮಾತನಾಡಿ, ದಿನಾಂಕ 29/08/2020ರಂದು ನಡೆಯುವ ಸಿಂಡಿಕೇಟ್‌ನ ಸಾಮಾನ್ಯ ಸಭೆಯ ಕಾರ್ಯಸೂಚಿಯಲ್ಲಿ ಮೈಸೂರು ವಿಶ್ವವಿದ್ಯಾನಿಲಯ ಉದ್ಯೋಗಿಗಳ ಗೃಹ ನಿರ್ಮಾಣ ಸಹಕಾರ ಸಂಘ (ನಿ)ಕ್ಕೆ ಸಂಬಂಧಿಸಿದ ಎಲ್ಲಾ ವಿಷಯಗಳನ್ನು ಸೇರಿಸಿ, ಈ ಕೆಳಕಂಡ ಪ್ರಶ್ನೆಗಳಿಗೆ ವಿವರ ನೀಡುವಂತೆ ಕೋರಿ ಪತ್ರ ಬರೆದಿರುವುದನ್ನು ಸಭೆಯು ಈ ಕೆಳಕಂಡಂತೆ ಕೂಲಂಕುಷವಾಗಿ ಪರಿಶೀಲಿಸಿತು.

   1. ಮೈಸೂರು ವಿಶ್ವವಿದ್ಯಾನಿಲಯ ಉದ್ಯೋಗಿಗಳ ಗೃಹ ನಿರ್ಮಾಣ ಸಹಕಾರ ಸಂಘ(ನಿ)ವು ಪ್ರಾರಂಭವಾಗಿದ್ದು ಯಾವಾಗ? ಈ ಸಂಘದಲ್ಲಿ ಇದುವರೆಗೆ ಎಷ್ಟು ಜನ ಸದಸ್ಯರಿದ್ದಾರೆ?
   2. ಇದುವರೆಗೂ ಈ ಗೃಹ ನಿರ್ಮಾಣ ಸಹಕಾರ ಸಂಘದಿಂದ ಮೈಸೂರು ವಿಶ್ವವಿದ್ಯಾನಿಲಯದ ಎಷ್ಟು ಜನ ಉದ್ಯೋಗಿಗಳಿಗೆ ನಿವೇಶನಗಳನ್ನು ನೊಂದಣಿ ಮಾಡಿಕೊಡಲಾಗಿದೆ?
   3. ಮೈಸೂರು ವಿಶ್ವವಿದ್ಯಾನಿಲಯದ ಇನ್ನುಳಿದ ಎಷ್ಟು ಸದಸ್ಯರಿಗೆ/ಉದ್ಯೋಗಿಗಳಿಗೆ ನಿವೇಶನಗಳನ್ನು ನೊಂದಣಿ ಮಾಡಿಕೊಡಬೇಕು? ಇವರಗೆ ನಿವೇಶನಗಳನ್ನು ಯಾವಾಗ ನೊಂದಣಿ ಮಾಡಿಕೊಡಲಾಗುತ್ತದೆ?

4. 2020ನೇ ಇಸವಿಯಲ್ಲಿ ಎಷ್ಟು ನಿವೇಶನಗಳನ್ನು ಮೈಸೂರು ವಿಶ್ವವಿದ್ಯಾನಿಲಯದ ಉದ್ಯೋಗಿಗಳಿಗೆ ನೊಂದಣಿ ಮಾಡಿಕೊಡಲಾಗಿದೆ? ಮೈಸೂರು ವಿಶ್ವವಿದ್ಯಾನಿಲಯದ ಉದ್ಯೋಗಿಗಳಲ್ಲದವರಿಗೆ ಎಷ್ಟು ನಿವೇಶನಗಳನ್ನು 2020ನೇ ಇಸವಿಯಲ್ಲಿ ನೊಂದಣಿ ಮಾಡಿಕೊಡಲಾಗಿದೆ? ಸಂಪೂರ್ಣ ಎಲ್ಲಾ ವಿವರವನ್ನು ನೀಡಿ.
5. ಮೈಸೂರು ವಿಶ್ವವಿದ್ಯಾನಿಲಯ ಉದ್ಯೋಗಿಗಳ ಗೃಹ ನಿರ್ಮಾಣ ಸಹಕಾರ ಸಂಘ(ನಿ) ದಿಂದ 2020ನೇ ಇಸವಿಯಲ್ಲಿ 19 ನಿವೇಶನಗಳನ್ನು ನೇರವಾಗಿ ವಿಶ್ವವಿದ್ಯಾನಿಲಯದ ನೌಕರರಲ್ಲದ ಸಹ ಸದಸ್ಯರುಗಳಿಗೆ ಮಾರಾಟ ಮಾಡಿ, ಸಂಘಕ್ಕೆ ವಂಚನೆ ಮಾಡಿರುವುದುರ ಬಗ್ಗೆ ಕರ್ನಾಟಕ ಸರ್ಕಾರದ ಸಹಕಾರ ಇಲಾಖೆಯ ಸಹಕಾರ ಸಂಘಗಳ ಜಂಟಿ ನಿಬಂಧಕರು ಅಥವಾ ಇನ್ಯಾವುದೇ ಅಧಿಕಾರಿಗಳಿಂದ ಪತ್ರ ಬಂದಿದೆಯೇ? ಬಂದಿದ್ದರೆ ಆ ಪತ್ರದ ವಿವರ ನೀಡಿ.
6. ಮೈಸೂರು ವಿಶ್ವವಿದ್ಯಾನಿಲಯ ಉದ್ಯೋಗಿಗಳ ಗೃಹ ನಿರ್ಮಾಣ ಸಹಕಾರ ಸಂಘ(ನಿ)ವು ಮೈಸೂರು ವಿಶ್ವವಿದ್ಯಾನಿಲಯಕ್ಕೆ ಮಾಸಿಕ ಬಾಡಿಗೆಯನ್ನು ನೀಡುತ್ತಿದ್ದಾರೆಯೇ? ಬಾಡಿಗೆಯನ್ನು ನೀಡುತ್ತಿದ್ದರೆ ಮಾಸಿಕ ಬಾಡಿಗೆ ಎಷ್ಟು? ಈ ಕಛೇರಿಯ ವಿದ್ಯುತ್ ಬಿಲ್ ಅನ್ನು ಯಾರು ಪಾವತಿಸುತ್ತಿದ್ದಾರೆ? ಈ ಕಛೇರಿಯ ಮೂಲಭೂತ ಸೌಕರ್ಯಗಳಾದ ಕುರ್ಚಿ, ಟೇಬಲ್, ಕಂಪ್ಯೂಟರ್ ಇನ್ನೂ ಮುಂತಾದ ವಸ್ತುಗಳನ್ನು ಎಲ್ಲಿಂದ ಒದಗಿಸಲಾಗಿದೆ. ಸಂಪೂರ್ಣ ಎಲ್ಲಾ ವಿವರವನ್ನು ನೀಡಿ.
7. ಪ್ರಸ್ತುತ, ಈ ಸಂಘದ ಆಡಳಿತ ಮಂಡಳಿಯಲ್ಲಿ (ನಿರ್ದೇಶಕರುಗಳು) ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಕಾರ್ಯನಿರ್ವಹಿಸುತ್ತಿರುವ ಉದ್ಯೋಗಿಗಳು ಯಾರು ಹಾಗೂ ನಿವೃತ್ತರಾಗಿರುವ ಉದ್ಯೋಗಿಗಳು ಯಾರು ವಿವರ ನೀಡಿ? ಹಾಗೂ

ಆರ್.ಪಾಲಾಕ್ಷ, ಕಾರ್ಯದರ್ಶಿ, ಮೈಸೂರು ವಿಶ್ವವಿದ್ಯಾನಿಲಯದ ಉದ್ಯೋಗಿಗಳ ಗೃಹ ನಿರ್ಮಾಣ ಸಹಕಾರ ಸಂಘ ನಿಯಮಿತ (ರಿ), ಕ್ರಾಫರ್ಡ್ ಭವನ, ಮೈಸೂರು ಇವರು ತಮ್ಮ ಪತ್ರದಲ್ಲಿ ಈ ಸಂಘದ ಕಾರ್ಯವ್ಯಾಪ್ತಿಯು ಮೈಸೂರು ವಿಶ್ವವಿದ್ಯಾನಿಲಯದ ಕಾರ್ಯವ್ಯಾಪ್ತಿಗೆ ಒಳಪಡುವುದಿಲ್ಲ. ಮೈಸೂರು ವಿಶ್ವವಿದ್ಯಾನಿಲಯ ಆಡಳಿತದ ವ್ಯಾಪ್ತಿಗೂ ಮೈಸೂರು ವಿಶ್ವವಿದ್ಯಾನಿಲಯ ಉದ್ಯೋಗಿಳ ಗೃಹ ನಿರ್ಮಾಣ ಸಹಕಾರ ಸಂಘಕ್ಕೂ ಯಾವುದೇ ಸಂಬಂಧವಿಲ್ಲವೆಂದು ತಿಳಿಸಿರುವುದನ್ನು ಸಭೆಯು ಕೂಲಂಕಷವಾಗಿ ಪರಿಶೀಲಿಸಿ, ಈ ಕೆಳಕಂಡಂತೆ ತೀರ್ಮಾನವನ್ನು ಕೈಗೊಂಡಿತು.

**ಮೈಸೂರು ವಿಶ್ವವಿದ್ಯಾನಿಲಯದ ಗೃಹ ನಿರ್ಮಾಣ ಸಹಕಾರ ಸಂಘವು ಮೈಸೂರು ವಿಶ್ವವಿದ್ಯಾನಿಲಯದ ಲಾಂಛನ, ಸ್ಥಳ, ಕಟ್ಟಡ, ಪೀಠೋಪಕರಣಗಳನ್ನು ಬಳಸಿಕೊಂಡು, ವಿಶ್ವವಿದ್ಯಾನಿಲಯದ ವ್ಯಾಪ್ತಿಗೆ ಬರುವುದಿಲ್ಲವೆಂದು ತಿಳಿಸಿರುವುದು ಸಮಂಜಸವಲ್ಲವೆಂದು, ಹಾಗೂ ಸದರಿ ಸಂಘದ ಬೈಲಾದಲ್ಲಿ ವಿಶ್ವವಿದ್ಯಾನಿಲಯದ ಅಧಿಕಾರಿಗಳು ಆಡಳಿತ ಮಂಡಳಿಯಲ್ಲಿ ಇಲ್ಲದೇ**

ಇರುವ ಪ್ರಯುಕ್ತ ಸದರಿ ಸಂಘದ ಕಾರ್ಯಚಟುವಟಿಕೆಗಳನ್ನು ಪರಿಶೀಲಿಸಿ, ತನಿಖೆ ನಡೆಸಲು ಸಹಕಾರ ಸಂಘದ ಕೇಂದ್ರ ಕಛೇರಿಗೆ ಪತ್ರ ಬರೆಯಲು ಸಿಂಡಿಕೇಟ್ ಸಭೆಯು ನಿರ್ಣಯಿಸಿತು.

5. ಮಾನ್ಯ ಸದಸ್ಯರಾದ ಶ್ರೀ ಎಸ್.ಡಿ.ದೊಡ್ಡಚಾರಿಯವರು ಮಾತನಾಡಿ, ಭೂ ವಿಜ್ಞಾನ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು ಇಲ್ಲಿ ಕಾರ್ಯ ನಿರ್ವಹಿಸುತ್ತಿದ್ದ ಇಬ್ಬರು ಅತಿಥಿ ಉಪನ್ಯಾಸಕರುಗಳಿಗೆ ಕಛೇರಿ ಆದೇಶ ನೀಡದೇ ಮತ್ತೊಬ್ಬ ಅಭ್ಯರ್ಥಿಗೆ ಆದೇಶ ನೀಡಿರುವುದನ್ನು ಸಭೆಯ ಗಮನಕ್ಕೆ ತಂದರು.

   ಮಾನ್ಯ ಕುಲಪತಿಗಳು ಮಾತನಾಡಿ, ಕೋವಿಡ್-19ರ ಹಿನ್ನೆಲೆಯಲ್ಲಿ 2019-20ನೇ ಸಾಲಿನ ಶೈಕ್ಷಣಿಕ ವರ್ಷದಲ್ಲಿ ಕಾರ್ಯ ನಿರ್ವಹಿಸುತ್ತಿದ್ದ ಅತಿಥಿ ಉಪನ್ಯಾಸಕರುಗಳನ್ನೇ 2020-21ನೇ ಸಾಲಿಗೂ ಮುಂದುವರೆಸಲು ಆದೇಶ ನೀಡಲಾಗಿದೆ ಎಂಬುದನ್ನು ಸಭೆಯ ಗಮನಕ್ಕೆ ತಂದರು. ಆದಾಗ್ಯೂ ಮತ್ತೊಂದು ಸುತ್ತೋಲೆಯನ್ನು ಎಲ್ಲಾ ಅಧ್ಯಯನ ವಿಭಾಗಗಳಿಗೆ ಕಳುಹಿಸಿ ಆದೇಶವನ್ನು ಪಾಲಿಸುವಂತೆ ಸೂಚಿಸಲಾಗುವುದೆಂದು ತಿಳಿಸಿದರು.

6. ಮಾನ್ಯ ಸದಸ್ಯರಾದ ಡಾ. ಎಂ.ಎಸ್.ದಾಮೋದರರವರು ಮಾತನಾಡಿ, ಮೈಸೂರು ವಿಶ್ವವಿದ್ಯಾನಿಲಯದ ವಿವಿಧ ವಿಭಾಗ/ಕೇಂದ್ರಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಉಪನ್ಯಾಸಕರುಗಳ ವೇತನವನ್ನು ಹೆಚ್ಚಳ ಮಾಡುವಂತೆ ಸಭೆಯನ್ನು ಕೋರಿದರು.

   ಮಾನ್ಯ ಕುಲಪತಿಯವರು ಮಾತನಾಡಿ, ಅತಿಥಿ ಉಪನ್ಯಾಸಕರುಗಳ ವೇತನವನ್ನು ಹೆಚ್ಚಳ ಮಾಡುವ ಬಗ್ಗೆ ದಿನಾಂಕ 07-10-2020 ರಂದು ನಡೆಯುವ ಮುಂದಿನ ವಿಶೇಷ ಸಿಂಡಿಕೇಟ್ ಸಭೆಯಲ್ಲಿ ನಿರ್ಣಯವನ್ನು ಕೈಗೊಳ್ಳಲಾಗುವುದೆಂದರು.

7. ಮೈಸೂರು ವಿಶ್ವವಿದ್ಯಾನಿಲಯವು 100ನೇ ವರ್ಷದ ಘಟಿಕೋತ್ಸವವನ್ನು ಆಚರಿಸುತ್ತಿರುವ ಸಂದರ್ಭದಲ್ಲಿ ಮುಖ್ಯ ಅತಿಥಿಗಳಾಗಿ ಶ್ರೀಮಾನ್ ನರೇಂದ್ರ ಮೋದಿ, ಪ್ರಧಾನ ಮಂತ್ರಿಗಳು, ಭಾರತ ಸರ್ಕಾರ, ಹಾಗು ಉನ್ನತ ಶಿಕ್ಷಣ ಮಂತ್ರಿ, ಕರ್ನಾಟಕ ಸರ್ಕಾರ, ಇವರುಗಳನ್ನು ಆಹ್ವಾನಿಸಲಾಗಿದ್ದು, ಇವರಿಂದ ಘಟಿಕೋತ್ಸವ ನಡೆಯುವ ಬಗ್ಗೆ ದಿನಾಂಕದ ನಿರೀಕ್ಷೆಯಲ್ಲಿದ್ದು, ಎಲ್ಲಾ ವಿದ್ಯಾರ್ಥಿಗಳಿಗೂ ಸಭಾಂಗಣದ ವೇದಿಕೆಯಲ್ಲಿ ಪದಕವನ್ನು ಪಡೆಯಲು ಅವಕಾಶ ನೀಡುವ ಬಗ್ಗೆ ವ್ಯವಸ್ಥೆಯನ್ನು ಹಂತ ಹಂತವಾಗಿ ಕೈಗೊಳ್ಳುವ ಕ್ರಮದ ಬಗ್ಗೆ ಮಾನ್ಯ ಕುಲಪತಿಯವರು ಸಭೆಗೆ ವಿವರಿಸಿದರು.

8. ಮಾನ್ಯ ಸದಸ್ಯರಾದ ಶ್ರೀ ಕುಮಾರ್‌ರವರು ಮಾತನಾಡಿ ಎಲ್ಲಾ ಸಮಿತಿಗಳಲ್ಲಿ ಸಿಂಡಿಕೇಟ್ ಸದಸ್ಯರನ್ನು ಸಹ ನೇಮಕ ಮಾಡಿಕೊಳ್ಳುವಂತೆ ಸಭೆಗೆ ಸೂಚಿಸಿದರು. ಸದರಿ ಸದಸ್ಯರ ಅಭಿಪ್ರಾಯವನ್ನು ಸಭೆಯು ಅನುಮೋದಿಸಿತು.

9. ಶ್ರೀ ದಿನೇಶ್ ಎಂ.ಗಾವಂಕರ್ ರವರು ಮಾತನಾಡಿ ಎಲ್ಲ ಸ್ನಾತಕ ಕಾಲೇಜುಗಳಲ್ಲಿ ಅನ್‌ಲೈನ್ ತರಗತಿಗಳು ಸಮರ್ಪಕವಾಗಿ ನಡೆಯುತ್ತಿಲ್ಲವೆಂದು ತಿಳಿಸಿದರು. ಇದಕ್ಕುತ್ತರವಾಗಿ ಸಂಬಂಧಪಟ್ಟ ಕಾಲೇಜಿನ ಮುಖ್ಯಸ್ಥರುಗಳು ಕ್ರಮವಹಿಸಕತಕ್ಕದೆಂದು ಮಾನ್ಯ ಕುಲಪತಿಗಳು ಸಭೆಗೆ ತಿಳಿಸಿದರು.

ನಂತರ ಶ್ರೀಮತಿ ಸಹನಾ ಶಿವಪ್ಪ, ಸಿಂಡಿಕೇಟ್ ಸದಸ್ಯರು ಇವರು 2017ರಿಂದ ಇಲ್ಲಿಯವರೆಗೆ ಮೂರು ವರ್ಷಗಳ ಕಾಲ ಸಿಂಡಿಕೇಟ್ ಸದಸ್ಯರಾಗಿದ್ದು, ಇವರ ಸದಸ್ಯತ್ವದ ಅವಧಿಯು ದಿನಾಂಕ 05-10-2020ರಂದು ಮುಕ್ತಾಯಗೊಳ್ಳುತ್ತಿರುವುದರಿಂದ, ಇವರ ಸೇವೆಯನ್ನು ಶ್ಲಾಘಿಸಿ ಸನ್ಮಾನಿಸಲಾಯಿತು.

ಕೊನೆಯಲ್ಲಿ ಅಧ್ಯಕ್ಷರು ಹಾಗೂ ಮಾನ್ಯ ಕುಲಪತಿಗಳು ಸಭೆಯಲ್ಲಿ ಭಾಗವಹಿಸಿದಂತಹ ಸದಸ್ಯರುಗಳಿಗೆ ವಂದನೆಗಳನ್ನು ತಿಳಿಸುವ ಮೂಲಕ ಸಭೆಯು ಮುಕ್ತಾಯವಾಯಿತು.

ಕುಲಸಚಿವ ಮತ್ತು ಸದಸ್ಯ ಕಾರ್ಯದರ್ಶಿ

ಕುಲಪತಿ ಮತ್ತು ಅಧ್ಯಕ್ಷರು